# ಗಂಗೊಳ್ಳಿ ಟೌನ್ ಸೌಹಾರ್ದ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್


ನೋಂದಣಿ ಸಂಖ್ಯೆ 552, ಕಟ್ಟಡ ಸಂಖ್ಯೆ: 5-215

ರಥಬೀದಿ ಸಮೀಪ, ಮುಖ್ಯರಸ್ತೆ, ಗಂಗೊಳ್ಳಿ – 576 216




ಶ್ರೀ ಎಚ್. ಲಕ್ಷ್ಮೀನಾರಾಯಣ ಕಾಮತ್

ಸಂಸ್ಥಾಪಕರು



# 105ನೇ ವಾರ್ಷಿಕ ಸಾಮಾನ್ಯ ಸಭೆ

## ಮತ್ತು

# ವಾರ್ಷಿಕ ವರದಿ 2024-25

ಆದಿತ್ಯವಾರ, ಸಪ್ಟೆಂಬರ್ 7, 2025

ಪೂರ್ವಾಹ್ನ 10-30ಕ್ಕೆ

ಶ್ರೀ ವೀರ ವಿಠಲ ಸಭಾಗೃಹ, ಶ್ರೀ ವಿಠಲ ರಖುಮಾಯಿ ದೇವಸ್ಥಾನ, ಗಂಗೊಳ್ಳಿ

ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ

# ಅಧ್ಯಕ್ಷರ ಮಾತು



ಸಹಕಾರ ಕ್ಷೇತ್ರದ ಮೂಲ ಉದ್ದೇಶ ಸದಸ್ಯರು ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿ ಸಾಧಿಸುವುದು. ಆರ್ಥಿಕ ಕ್ಷೇತ್ರದಲ್ಲಿ ಜನರ ಜೀವನಾಡಿಯಾಗಿ ಸಹಕಾರಿ ಕ್ಷೇತ್ರವು ಬೆಳೆದು ಬರುವ ಪೂರಕ ವಾತಾವರಣವು ನಮ್ಮ ದೇಶದಲ್ಲಿ ಗೋಚರಿಸುತ್ತಿದೆ. ದೇಶದ ಸುಸ್ಥಿರ ಬೆಳವಣಿಗೆಯಲ್ಲಿ ಸಹಕಾರ ಕ್ಷೇತ್ರವು ಮಹತ್ವದ ಪಾತ್ರವನ್ನು ವಹಿಸುತ್ತದೆ ಎಂಬುದನ್ನು ಮನಗಂಡ ಕೇಂದ್ರ ಸರಕಾರವು ಪ್ರತ್ಯೇಕವಾದ ಸಹಕಾರ ಸಚಿವಾಲಯವನ್ನು ಸ್ಥಾಪಿಸಿ ಸಹಕಾರಿ ನೀತಿಯನ್ನು ರಚಿಸಿದ್ದು, ಸಾಮಾನ್ಯ ಜನರಿಗೂ ಕೂಡ ಸಹಕಾರ ಕ್ಷೇತ್ರದ ಬಗ್ಗೆ ಅರಿವು ಮೂಡಲು ಸಹಾಯಕವಾಗಿದೆ.

ಸ್ವಾತ್ರಂತ್ರ್ಯ ದೊರೆತ 77 ವರ್ಷಗಳ ಬಳಿಕ ಭಾರತದ ಮೊದಲ ಸಹಕಾರಿ ವಿಶ್ವವಿದ್ಯಾಲಯವನ್ನು ಕೇಂದ್ರ ಸರಕಾರವು ಪ್ರಾರಂಭಿಸಿದ್ದು, ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯವು ಪ್ರತಿವರ್ಷ 8 ಲಕ್ಷ ಜನರಿಗೆ ತರಬೇತಿ ನೀಡುವ ಮೂಲಕ ಅವರನ್ನು ಭವಿಷ್ಯಕ್ಕೆ ಸಿದ್ಧಗೊಳಿಸುವ ಗುರಿಯನ್ನು ಹೊಂದಿರುವುದು ಸಹಕಾರಿಗಳಾದ ನಮಗೆಲ್ಲರಿಗೂ ಹೆಮ್ಮೆ..

1920 ರಲ್ಲಿ ಸ್ಥಾಪನೆಯಾದ ನಮ್ಮ ಸಹಕಾರಿ ಸಂಘವು, 2003 ರಲ್ಲಿ ಸೌಹಾರ್ದ ಕಾಯಿದೆಗೆ ಪರಿವರ್ತನೆಗೊಂಡು, ಉಡುಪಿ ಜಿಲ್ಲಾ ಮಟ್ಟದ ಕಾರ್ಯಕ್ಷೇತ್ರವನ್ನು ಹೊಂದಿ 3 ಶಾಖೆಗಳ ಮೂಲಕ ತನ್ನ ಸದಸ್ಯರಿಗೆ ಸಂತೃಪ್ತ ಸೇವೆಯನ್ನು ನೀಡುವಲ್ಲಿ ನಿರಂತರ ಪ್ರಯತ್ನಗಳನ್ನು ನಡೆಸುತ್ತಿದ್ದು ಸತತ ನಾಲ್ಕನೆ ಸಾಲಿನಲ್ಲಿಯೂ ರೂ. 1 ಕೋಟಿಗೂ ಅಧಿಕ ಲಾಭ ಗಳಿಸಿದೆ. ಮತ್ತಷ್ಟು ಜನ ಸಾಮಾನ್ಯರಿಗೆ ಗುಣಮಟ್ಟದ ಸೇವೆಯನ್ನು ನೀಡಬೇಕು, ಯುವಕರು ಸಹಕಾರ ಕ್ಷೇತ್ರದಲ್ಲಿ ಸಕ್ರಿಯರಾಗಬೇಕು, ಸಹಕಾರ ಕ್ಷೇತ್ರವನ್ನು ಇನ್ನಷ್ಟು ಬಲಪಡಿಸಬೇಕು, ಬೆಳೆಸಬೇಕು ಎನ್ನುವ ಸದಾಶಯ ನಮ್ಮದು.

2018ರಿಂದಲೇ ಕ್ಲೌಡ್ ತಂತ್ರಾಂಶದಲ್ಲಿ ಕಾರ್ಯನಿರ್ವಹಿಸುತ್ತಿರುವ ನಮ್ಮ ಸಂಘವು ಸದಸ್ಯರ ಬೇಡಿಕೆ ಮತ್ತು ವಿತ್ತೀಯ ಮಾರುಕಟ್ಟೆಯ ಪ್ರಚಲಿತ ಬದಲಾವಣೆಗಳಿಗೆ ಅನುಗುಣವಾಗಿ ಗಣಕಯಂತ್ರ ತಂತ್ರಾಂಶವನ್ನು ಕಾಲಕಾಲಕ್ಕೆ ಉನ್ನತೀಕರಣಗೊಳಿಸುತ್ತಿದೆ. ಈ ನಿಟ್ಟಿನಲ್ಲಿ ಕಳೆದ ಸಾಲಿನಿಂದ ಸದಸ್ಯರ ವ್ಯವಹಾರಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ವಾಟ್ಸಾಪ್ ಸಂದೇಶಗಳ ಮೂಲಕ ನೀಡಲಾಗುತ್ತಿದ್ದು, ಇದು ಅವಿಭಜಿತ  ದಕ್ಷಿಣ ಕನ್ನಡ ಜಿಲ್ಲೆಯ ಸಹಕಾರ ಕ್ಷೇತ್ರದಲ್ಲಿ ಪ್ರಥಮ ಪ್ರಯೋಗವೆಂಬುದು ನಮಗೆಲ್ಲರಿಗೂ ಸಂತಸದ ವಿಚಾರ.

ಸಾಮಾಜಿಕ ಕಳಕಳಿ ಎಂಬುದು ವಿಶಾಲವಾದ ಚಿಂತನೆಗೆ ಅವಕಾಶ ಮಾಡಿಕೊಡುತ್ತದೆ. ಸಮಾಜ ಮತ್ತು ಅಭಿವೃದ್ಧಿಯಲ್ಲಿ ಸಹಕಾರ ಸಂಸ್ಥೆಗಳು ತೊಡಗಿಸಿಕೊಳ್ಳಬೇಕೆಂಬುದು ನಮ್ಮ ಸಂಘದ ಆಶಯ. "ಸರ್ವೇ ಜನಾ: ಸುಖಿನೋ ಭವಂತು" ಎಂಬ ಧ್ಯೇಯದೊಂದಿಗೆ ಸಹಕಾರಿಯು ಆರ್ಥಿಕ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಿಕೊಂಡು ಲಾಭ ಗಳಿಸುವುದೇ ಮೂಲ ಗುರಿಯನ್ನಾಗಿರಿಸದೇ ಸಾಮಾಜಿಕ ಬದ್ಧತೆಗಾಗಿ ಹಲವು ಸಮಾಜಮುಖಿ ಚಟುವಟಿಕೆಗಳನ್ನು ಕೈಗೊಂಡಿದೆ. ಗಂಗೊಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಲ್ಯಾಪ್ ಟಾಪ್ ಮತ್ತು ಪ್ರಿಂಟರ್ ಕೊಡುಗೆ, ಕಾರ್ಯವ್ಯಾಪ್ತಿಯ ಹಲವು ಶಿಕ್ಷಣ ಸಂಸ್ಥೆಗಳಿಗೆ ಉದಾರ ಕೊಡುಗೆ, ಶಿಕ್ಷಣ ಹಾಗೂ ಕ್ರೀಡೆಯಲ್ಲಿ ವಿಶಿಷ್ಟ ಸಾಧನೆಗೈದ ಪ್ರತಿಭಾನ್ವಿತ ವಿಧ್ಯಾರ್ಥಿಗಳ ಗುರುತಿಸುವಿಕೆ, ಸಹಕಾರ ಕ್ಷೇತ್ರಕ್ಕೆ ಗಣನೀಯ ಕೊಡುಗೆ ನೀಡಿದ ಗಣ್ಯರಿಗೆ ಗೌರವ ಸಲ್ಲಿಕೆ ಈ ಸಾಲಿನ ನಮ್ಮ ಸಂಘದ ಸಮಾಜಮುಖಿ ಕಾರ್ಯಕ್ರಮಗಳಲ್ಲಿ ಕೆಲವು ಮಾತ್ರ.

ಸದಸ್ಯರ ಸಕ್ರಿಯ ಪಾಲ್ಗೊಳ್ಳುವಿಕೆ ಸಹಕಾರಿ ಸಂಘದ ಪ್ರಗತಿಯಲ್ಲಿ ಬಹು ಮುಖ್ಯ ಪಾತ್ರವನ್ನು ವಹಿಸುತ್ತದೆ. ಈ ನಿಟ್ಟಿನಲ್ಲಿ ತಾವೆಲ್ಲರೂ ತಮ್ಮೆಲ್ಲ ವ್ಯವಹಾರಗಳನ್ನು ಸಂಘದೊಂದಿಗೆ ನಡೆಸುವುದರೊಂದಿಗೆ ಸಂಘದ ಸೇವೆಗಳನ್ನು ಪ್ರಚುರಪಡಿಸಲು ವಿನಂತಿಸುತ್ತಿದ್ದೇನೆ.
ಸಂಘದ ಬೆಳವಣಿಗೆಗೆ ತಮ್ಮೆಲ್ಲರ ಸೃಜನಶೀಲ ಕಲ್ಪನೆ, ಯೋಚನೆಗಳನ್ನು ಸದಾ ಸ್ವಾಗತಿಸುತ್ತಾ ಸಂಘದ ಪ್ರಗತಿಗೆ ಸಹಕರಿಸಿದ ಹಾಗೂ ಸಹಕರಿಸುತ್ತಿರುವ ಎಲ್ಲಾ ಸದಸ್ಯರಿಗೆ, ಮಾಜಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರಿಗೆ, ಪ್ರಸ್ತುತ ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಸಿಬ್ಬಂದಿಗಳು, ಸಂಘದ ಸುವರ್ಣನಿಧಿ ಸಂಗ್ರಾಹಕರು, ಚಿನ್ನಾಭರಣ ಪರೀಕ್ಷಕರು, ಕಾನೂನು ಸಲಹೆಗಾರರು, ಲೆಕ್ಕಪರಿಶೋಧಕರು, ಹಾಗೂ ಮೌಲ್ಯಮಾಪಕರಿಗೆ ಪ್ರೀತಿಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ನನ್ನ ಅಧ್ಯಕ್ಷತೆಯಲ್ಲಿ ಮುಂದಿನ ದಿನಗಳಲ್ಲಿ ಯೋಜಿಸಲಾದ ಎಲ್ಲಾ ಅಭಿವೃದ್ಧಿಪರ ಕಾರ್ಯಗಳಿಗೆ ಸಲಹೆ, ಸಹಕಾರ ಹಾಗೂ ಸಹಾಯವನ್ನು ಕೋರುತ್ತಾ ಸಂಘದ 105 ನೇ ಸಾಮಾನ್ಯ ಸಭೆಗೆ ತಮ್ಮೆಲ್ಲರನ್ನೂ ಪ್ರೀತಿಪೂರ್ವಕವಾಗಿ ಸ್ವಾಗತಿಸುತ್ತಿದ್ದೇನೆ.

**ಶುಭಾಶಯಗಳೊಂದಿಗೆ**


**ಶ್ರೀ ಜಿ. ವೆಂಕಟೇಶ ಶೆಣೈ**

(ಅಧ್ಯಕ್ಷರು)

ಮೊ.: 9845365123

# ಗಂಗೊಳ್ಳಿ ಟೌನ್ ಸೌಹಾರ್ದ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್

## ಪಾಲು ಬಂಡವಾಳ




## ಠೇವಣಿಗಳು




## ಸಾಲಗಳು



# ಗಂಗೊಳ್ಳಿ ಟೌನ್ ಸೌಹಾರ್ದ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್

## ದುಡಿಯುವ ಬಂಡವಾಳ




## ನಿವ್ವಳ ಲಾಭ




## ನಿಧಿಗಳು



# ಗಂಗೊಳ್ಳಿ ಟೌನ್ ಸೌಹಾರ್ದ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್

| | | |
|---|---|---|
| ನೋಂದಾಯಿತ ಕಚೇರಿ ಮತ್ತು ಗಂಗೊಳ್ಳಿ ಶಾಖೆ | : | ಕಟ್ಟಡ ಸಂಖ್ಯೆ–5–215<br>ರಥಬೀದಿ ಸಮೀಪ, ಮುಖ್ಯ ರಸ್ತೆ,<br>ಗಂಗೊಳ್ಳಿ–576 216<br>ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ |
| ದೂರವಾಣಿ | : | ಮುಖ್ಯ ಕಾರ್ಯನಿರ್ವಾಹಕ : 8147355477<br>ಪ್ರಧಾನ ಕಛೇರಿ : 08254–265459, 8147355476 |
| ನೋಂದಣಿ ಸಂಖ್ಯೆ | : | ಎ.ಆರ್. 38/ಸಂಪನ್ಮೂಲ/486/ಸೌ.ಕಾ./ ನೋಂದಣಿ/ 552/02–03 ದಿನಾಂಕ 17–02–2003<br>ಎ.ಆರ್/552/02–03 ದಿನಾಂಕ 07/01/2003<br>GST : 29AAAAG2286M1ZB<br>PAN : AAAAG2286M<br>TAN : BLRG03478G |
| ಕಾರ್ಯಕ್ಷೇತ್ರ | : | ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಹೈಕಾಡಿ ಗ್ರಾಮವನ್ನು ಹೊರತುಪಡಿಸಿ ಉಡುಪಿ ಜಿಲ್ಲಾ ವ್ಯಾಪ್ತಿ |
| ಕೋಟೇಶ್ವರ ಶಾಖೆ | : | ಶಿವಾನಂದ ಕಾಂಪ್ಲೆಕ್ಸ್, ರಥ ಬೀದಿ,<br>ಮುಖ್ಯ ರಸ್ತೆ, ಕೋಟೇಶ್ವರ– 576 222<br>ದೂರವಾಣಿ : 08254–263459, 8147355475 |
| ಉಪ್ಪುಂದ ಶಾಖೆ | : | ಆರ್ನವಿ ಕಾಂಪ್ಲೆಕ್ಸ್, ಶಂಕರ ಕಲಾ ಮಂದಿರ ಸಮೀಪ,<br>ರಾಷ್ಟ್ರೀಯ ಹೆದ್ದಾರಿ–66, ಉಪ್ಪುಂದ – 576 232<br>ದೂರವಾಣಿ : 08254–256449, 8147355474 |
| ಲೆಕ್ಕ ಪರಿಶೋಧಕರು | : | C.A. ಎನ್. ಶಾಂತಾರಾಮ ನಾಯಕ್<br>ಲೆಕ್ಕಪರಿಶೋಧಕರು,<br>ಕುಂದಾಪುರ – 576 201<br>ದೂರವಾಣಿ : 9448887977 |
| ಆಂತರಿಕ ಲೆಕ್ಕ ಪರಿಶೋಧಕರು: | | ಮೆಸರ್ಸ್ ಜಯಲಕ್ಷ್ಮೀ ಕಾಮತ್ & ಕೊ<br>ಲೆಕ್ಕಪರಿಶೋಧಕರು<br>ಅಂಬಲಪಾಡಿ, ಉಡುಪಿ 576 103<br>ದೂರವಾಣಿ : 7353589371, 8792049371 |

# 105 ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರ

**ಮಾನ್ಯರೇ,**

**ಸಂಘದ 2024-25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯು 07-09-2025 ನೇ ಆದಿತ್ಯವಾರ ಪೂರ್ವಾಹ್ನ 10-30 ಕ್ಕೆ ಗಂಗೊಳ್ಳಿಯ ಶ್ರೀ ವಿಠಲ ರಖುಮಾಯಿ ದೇವಸ್ಥಾನದ ಶ್ರೀ ವೀರ ವಿಠಲ ಸಭಾಗೃಹದಲ್ಲಿ ನಡೆಯಲಿದೆ.**

**ತಾವು ಈ ಸಭೆಗೆ ಆಗಮಿಸಬೇಕಾಗಿ ವಿನಂತಿ.**

**ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು :-**

1. 105ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲಿಸುವುದು.
2. 15-09-2024 ರಂದು ನಡೆದ 104ನೇ ಸಾಮಾನ್ಯ ಸಭೆಯ ನಡವಳಿಕೆಗಳನ್ನು ದೃಢೀಕರಿಸುವುದು.
3. 2024-25ನೇ ಸಾಲಿನ ಆಡಳಿತ ಮಂಡಳಿ ವರದಿಯ ಅನುಮೋದನೆ.
4. 2024-25ನೇ ಸಾಲಿನ ಲೆಕ್ಕಪರಿಶೋಧನಾ ಹಾಗೂ ಅನುಪಾಲನಾ ವರದಿಯ ಅನುಮೋದನೆ.
5. 2024-25ನೇ ಸಾಲಿನ ನಿವ್ವಳ ಲಾಭದ ವಿಂಗಡಣೆ.
6. 2024-25ನೇ ಸಾಲಿನಲ್ಲಿ ಅಂದಾಜು ಮೀರಿದ ಖರ್ಚಿನ ಪರಿಶೀಲನೆ ಮತ್ತು ಮಂಜೂರಾತಿ.
7. 2025-26ನೇ ಸಾಲಿನ ಮುಂಗಡ ಪತ್ರದ ಅನುಮೋದನೆ.
8. 2024-25ನೇ ಸಾಲಿನಲ್ಲಿ ಸೇರ್ಪಡೆಯಾದ ಹಾಗೂ ಸದಸ್ಯತ್ವ ತ್ಯಜಿಸಿದವರ ವಿವರ ಅನುಮೋದನೆ.
9. 2025-26ನೇ ಸಾಲಿಗೆ ಶಾಸನಬದ್ಧ ಲೆಕ್ಕ ಪರಿಶೋಧಕರ ನೇಮಕಾತಿ ಹಾಗೂ ಶುಲ್ಕ ನಿಗದಿ.
10. 2026-27ನೇ ಸಾಲಿಗೆ ಆಂತರಿಕ ಲೆಕ್ಕ ಪರಿಶೋಧಕರ ನೇಮಕಾತಿ ಹಾಗೂ ಶುಲ್ಕ ನಿಗದಿ.
11. 2025-26ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯ ಅನುಮೋದನೆ.
12. ಮೀಸಲು ಹಾಗೂ ಇತರ ನಿಧಿಗಳ ವಾಸ್ತವಿಕ ಬಳಕೆಯ ಪುನರಾವಲೋಕನ.
13. ಸಿಬ್ಬಂದಿ ಸೇವಾ ನಿಯಮಗಳಲ್ಲಿ ಕಾಲಮಿತಿ ಭಡ್ತಿ ಸೇರ್ಪಡೆಗೊಳಿಸುವ ಕುರಿತು.
14. ಅನುತ್ಪಾದಕ ಸಾಲಗಳನ್ನು ಆಸ್ತಿ ಜವಾಬ್ದಾರಿ ತಖ್ತೆಯಿಂದ ಹೊರಗಿಡುವ ಕುರಿತು.
15. ಅಧ್ಯಕ್ಷರ ಅನುಮತಿ ಮೇರೆಗೆ ಇತರ ವಿಷಯಗಳ ಪರಿಶೀಲನೆ ಮತ್ತು ನಿರ್ಣಯ.

/ಆಡಳಿತ ಮಂಡಳಿಯ ಅನುಮತಿ ಮೇರೆಗೆ/

ಸ್ಥಳ : ಗಂಗೊಳ್ಳಿ
ತಾ. : 12-08-2025

ಸಹಿ/-
ಮುಖ್ಯ ಕಾರ್ಯನಿರ್ವಾಹಕ

**ಸಭೆಯ ಬಳಿಕ ಸಸ್ಯಾಹಾರಿ ಭೋಜನ ವ್ಯವಸ್ಥೆಗೊಳಿಸಲಾಗಿದೆ.**

## ಸಾಮಾನ್ಯ ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳ ಕುರಿತು ಟಿಪ್ಪಣಿ

**01 :– 105ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲಿಸುವುದು.**
**ಟಿಪ್ಪಣಿ** :– ಸಂಘದ 'ಅ' ವರ್ಗದ ಸದಸ್ಯರಿಗೆ ಸಾಮಾನ್ಯ ಅಂಚೆ ಮೂಲಕ ಕಳುಹಿಸಲಾದ ಸೂಚನಾ ಪತ್ರವನ್ನು ಓದಿ ಅಂಗೀಕರಿಸುವ ಬಗ್ಗೆ ನಿರ್ಣಯ ಕೈಗೊಳ್ಳುವುದು. (ಪುಟ ಸಂಖ್ಯೆ 1)

**02 :–15–09–2024 ರಂದು ನಡೆದ 104ನೇ ಸಾಮಾನ್ಯ ಸಭೆಯ ನಡವಳಿಕೆಗಳನ್ನು ದೃಢೀಕರಿಸುವುದು.**
**ಟಿಪ್ಪಣಿ** :– **104**ನೇ ಸಾಮಾನ್ಯ ಸಭೆಯ ನಡವಳಿಕೆಯನ್ನು ಸ್ವೀಕರಿಸಿ ದೃಢೀಕರಿಸುವ ಬಗ್ಗೆ ನಿರ್ಣಯ ಕೈಗೊಳ್ಳುವುದು. (ನಡವಳಿಕೆಗಳನ್ನು ಪುಸ್ತಕದ 8, 9, 10, 11ನೇ ಪುಟದಲ್ಲಿ ಮುದ್ರಿಸಲಾಗಿದೆ.)

**03 :– 2024–25ನೇ ಸಾಲಿನ ಆಡಳಿತ ಮಂಡಳಿ ವರದಿಯ ಅನುಮೋದನೆ.**
**ಟಿಪ್ಪಣಿ** :– ಸಂಕ್ಷಿಪ್ತ ಆಡಳಿತ ಮಂಡಳಿ ವರದಿಯನ್ನು ಈ ಪುಸ್ತಕದಲ್ಲಿ ನೀಡಲಾಗಿದ್ದು, ಸದ್ರಿ ವರದಿಯನ್ನು ಓದಿ ಅನುಮೋದಿಸುವ ಬಗ್ಗೆ ನಿರ್ಣಯ ಕೈಗೊಳ್ಳುವುದು. (ಪುಟ ಸಂಖ್ಯೆ 12,13,14,15)

**04 :– 2024–25ನೇ ಸಾಲಿನ ಲೆಕ್ಕಪರಿಶೋಧನಾ ಹಾಗೂ ಅನುಪಾಲನಾ ವರದಿಯ ಅನುಮೋದನೆ.**
**ಟಿಪ್ಪಣಿ** :– ಸಂಘದ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಎನ್. ಶಾಂತಾರಾಮ ನಾಯಕ್ ರವರು ನೀಡಿದ **2024–25**ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಹಾಗೂ ದಿನಾಂಕ 12–08–2025 ರಂದು ನಡೆದ ಆಡಳಿತ ಮಂಡಳಿ ಸಭೆಯಲ್ಲಿ ತಯಾರಿಸಲಾದ ಅನುಪಾಲನಾ ವರದಿಯನ್ನು ಪರಿಶೀಲಿಸಿ ಅನುಮೋದಿಸುವ ಬಗ್ಗೆ ನಿರ್ಣಯ ಕೈಗೊಳ್ಳುವುದು. (ಪುಟ ಸಂಖ್ಯೆ 16,17)

**05 :– 2024–25ನೇ ಸಾಲಿನ ನಿವ್ವಳ ಲಾಭದ ವಿಂಗಡಣೆ.**
**ಟಿಪ್ಪಣಿ** :– ಸಂಘದ ಉಪವಿಧಿಗಳಿಗನುಗುಣವಾಗಿ ನಿವ್ವಳ ಲಾಭವನ್ನು ವಿಂಗಡಿಸುವುದು. ಆಡಳಿತ ಮಂಡಳಿ ವರದಿಯಲ್ಲಿ ವಿವರಿಸಲಾಗಿದೆ. (ಪುಟ ಸಂಖ್ಯೆ 14)

**06 :– 2024–25ನೇ ಸಾಲಿನಲ್ಲಿ ಅಂದಾಜು ಮೀರಿದ ಖರ್ಚಿನ ಪರಿಶೀಲನೆ ಮತ್ತು ಮಂಜೂರಾತಿ**
**ಟಿಪ್ಪಣಿ** :– ವರದಿ ಸಾಲಿನಲ್ಲಿ ಅಂದಾಜು ಮೀರಿದ ಖರ್ಚುಗಳನ್ನು ಪರಿಶೀಲಿಸಿ ಮಂಜೂರಾತಿ ಮಾಡುವ ಬಗ್ಗೆ ನಿರ್ಣಯ ಕೈಗೊಳ್ಳುವುದು. (ವಿವರ ಲಗತ್ತಿಸಲಾಗಿದೆ ಪುಟ ಸಂಖ್ಯೆ 18,19)

**07 :– 2025–26ನೇ ಸಾಲಿನ ಮುಂಗಡ ಪತ್ರದ ಅನುಮೋದನೆ.**
**ಟಿಪ್ಪಣಿ** :– **2025–26**ನೇ ಸಾಲಿನ ಮುಂಗಡ ಪತ್ರವನ್ನು ಅನುಮೋದಿಸುವುದು. (ಪುಟ ಸಂಖ್ಯೆ 18,19)

**08 :– 2024–25ನೇ ಸಾಲಿನಲ್ಲಿ ಸೇರ್ಪಡೆಯಾದ ಹಾಗೂ ಸದಸ್ಯತ್ವ ತ್ಯಜಿಸಿದವರ ವಿವರ ಅನುಮೋದನೆ.**
**ಟಿಪ್ಪಣಿ** :– **2024–25**ನೇ ಸಾಲಿನಲ್ಲಿ **329** 'ಅ' ವರ್ಗದ ಸದಸ್ಯರು, **4** 'ಬಿ' ವರ್ಗದ ಸದಸ್ಯರ ಸೇರ್ಪಡೆಯಾಗಿದ್ದು, **28** 'ಅ' ವರ್ಗದ ಹಾಗೂ **13** 'ಬಿ' ವರ್ಗದ ಸದಸ್ಯರು ಸದಸ್ಯತ್ವವನ್ನು ತ್ಯಜಿಸಿದ್ದು, ವಿವರಗಳನ್ನು ಪರಿಶೀಲಿಸಿ ಅನುಮೋದಿಸುವ ಕುರಿತು.

**09 :– 2025–26ನೇ ಸಾಲಿಗೆ ಶಾಸನಬದ್ಧ ಲೆಕ್ಕ ಪರಿಶೋಧಕರ ನೇಮಕಾತಿ ಹಾಗೂ ಶುಲ್ಕ ನಿಗದಿ.**
**ಟಿಪ್ಪಣಿ** :– ಉಡುಪಿಯ ಮೆಸರ್ಸ್ ಕಾಮತ್ & ಕೋ ಇವರ ನೇಮಕಾತಿಗೆ ಆಡಳಿತ ಮಂಡಳಿ ಶಿಫಾರಸ್ಸು ಮಾಡಿದೆ.

**10 :– 2026–27ನೇ ಸಾಲಿಗೆ ಆಂತರಿಕ ಲೆಕ್ಕ ಪರಿಶೋಧಕರ ನೇಮಕಾತಿ ಹಾಗೂ ಶುಲ್ಕ ನಿಗದಿ.**

**ಟಿಪ್ಪಣಿ** :– ಉಡುಪಿಯ ಮೆಸರ್ಸ್ ಜಯಲಕ್ಷ್ಮೀ ಕಾಮತ್ & ಕೋ. ಇವರ ನೇಮಕಾತಿಗೆ ಆಡಳಿತ ಮಂಡಳಿ ಶಿಫಾರಸ್ಸು ಮಾಡಿದೆ.

**11 :– 2025–26ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯ ಅನುಮೋದನೆ.**

**ಟಿಪ್ಪಣಿ** :– **2025–26**ನೇ ಸಾಲಿನ ಕ್ರಿಯಾ ಯೋಜನೆಯನ್ನು ಅನುಮೋದಿಸುವ ಬಗ್ಗೆ ನಿರ್ಣಯ. (ವಿವರ ಲಗತ್ತಿಸಲಾಗಿದೆ ಪುಟ ಸಂಖ್ಯೆ 15)

**12 :–ಮೀಸಲು ಹಾಗೂ ಇತರ ನಿಧಿಗಳ ವಾಸ್ತವಿಕ ಬಳಕೆಯ ಪುನರಾವಲೋಕನ.**

**ಟಿಪ್ಪಣಿ** :– ವರದಿ ಸಾಲಿನಲ್ಲಿ ಶಿಕ್ಷಣ ನಿಧಿಗೆ ರೂ. 2,18,198/– ಪಾವತಿ ಹಾಗೂ ಸಾರ್ವಜನಿಕ ಉಪಕಾರ ನಿಧಿಯಿಂದ ರೂ. 2,14,990/–ನ್ನು ವ್ಯಯಿಸಲಾಗಿದ್ದು ಇವುಗಳ ಅನುಮೋದನೆ.

**13 :–ಸಿಬ್ಬಂದಿ ಸೇವಾ ನಿಯಮಗಳಲ್ಲಿ ಕಾಲಮಿತಿ ಭಡ್ತಿ ಸೇರ್ಪಡೆ ಕುರಿತು**

**ಟಿಪ್ಪಣಿ** :– ಸಿಬ್ಬಂದಿ ಸೇವಾ ನಿಯಮಗಳಲ್ಲಿ ಕಾಲಮಿತಿ ಭಡ್ತಿ ಬಗ್ಗೆ ನಿಯಮಗಳನ್ನು ರಚಿಸಿಲ್ಲವಾದ್ದರಿಂದ ಕಾಲಮಿತಿ ಭಡ್ತಿಯನ್ನು ಸಿಬ್ಬಂದಿ ಸೇವಾ ನಿಯಮಗಳಲ್ಲಿ ಸೇರ್ಪಡೆಗೊಳಿಸಲು ಆಡಳಿತ ಮಂಡಳಿಯು ಶಿಪಾರಸ್ಸು ಮಾಡಿದ್ದು ವಿವರ ಈ ಕೆಳಗಿನಂತಿದೆ.

* ಸಂಘದ ಖಾಯಂ ನೌಕರನು ಒಂದೇ ಹುದ್ದೆಯಲ್ಲಿ ನಿರಂತರ 10 ವರ್ಷ ಸೇವೆ ಸಲ್ಲಿಸಿದ್ದಲ್ಲಿ ಅಂತಹ ನೌಕರನಿಗೆ ಒಂದು ವಾರ್ಷಿಕ ಮುಂಬಡ್ತಿ ನೀಡಬಹುದು ಹಾಗೂ ವೇತನವನ್ನು ನಿಗದಿಪಡಿಸಬಹುದು.
* ಸಂಘದ ಖಾಯಂ ನೌಕರನು ಒಂದೇ ಹುದ್ದೆಯಲ್ಲಿ ನಿರಂತರ 15 ವರ್ಷ ಸೇವೆ ಸಲ್ಲಿಸಿದ್ದಲ್ಲಿ ಅಂತಹ ಸಿಬ್ಬಂದಿಗೆ ಇನ್ನೊಂದು ಸ್ವಯಂ ಚಾಲಿತ ವೇತನ ಮುಂಬಡ್ತಿ (ಇನ್‌ಕ್ರಿಮೆಂಟ್) ನೀಡಿ ನಂತರದ ವೇತನ ಶ್ರೇಣಿ ನಿಗದಿ ಪಡಿಸಿ ಮೂಲ ವೇತನವನ್ನು ನಿಗಡಿಪಡಿಸಬಹುದು.
* ಒಂದೇ ಹುದ್ದೆಯಲ್ಲಿ ಪದೋನ್ನತಿ ಪಡೆಯದೇ 20 ವರ್ಷಗಳ ಸೇವೆ ಸಲ್ಲಿಸಿದ್ದಲ್ಲಿ ಆಯಾ ಕಾಲಿಕ ವೇತನ ಶ್ರೇಣಿಯಲ್ಲಿ ಒಂದು ವೇತನ ಮುಂಬಡ್ತಿ ನೀಡಬಹುದು.
* ಮೇಲೆ ವಿವರಿಸಿರುವಂತೆ ಈಗಾಗಲೇ ಒಂದೇ ಹುದ್ದೆಯಲ್ಲಿ ನಿರಂತರ 10,15,20 ವರ್ಷ ಸೇವೆ ಸಲ್ಲಿಸಿದ್ದ ನೌಕರರಿಗೆ ಸಾಮಾನ್ಯ ಸಭೆ ನಿಗದಿಪಡಿಸಿದ ದಿನದಿಂದ ಮಾತ್ರ ಈಗಿರುವ ವೇತನ ಶ್ರೇಣಿಯಲ್ಲಿರುವ ಕ್ರಮವಾಗಿ 1,2 ಮತ್ತು 3 ಮುಂಬಡ್ತಿಯನ್ನು (ಇನ್‌ಕ್ರಿಮೆಂಟ್)ಯನ್ನು ನೀಡಬೇಕೆ ಹೊರತು 10,15,20 ವರ್ಷ ಪೂರ್ಣಗೊಂಡ ದಿನದಿಂದಲ್ಲ.

**14 :– ಅನುತ್ಪಾದಕ ಸಾಲಗಳನ್ನು ಆಸ್ತಿ ಜವಾಬ್ದಾರಿ ತಖ್ತೆಯಿಂದ ಹೊರಗಿಡುವ ಕುರಿತು.**

**ಟಿಪ್ಪಣಿ** :– ಒಟ್ಟು 50 ಸಾಲಗಳ ರೂ. 15,15,269/– ಮೊತ್ತದ ವಸೂಲಾತಿ ಪ್ರಕ್ರಿಯೆಗಳು ಮುಂದುವರೆದಿದ್ದು ದಾವಾ ದಾಖಲಿಸಲಾಗಿದೆ. ವಸೂಲಾತಿ ವಿಳಂಬವಾಗುತ್ತಿರುವುದರಿಂದ ಸದ್ರಿ ಸಾಲಗಳನ್ನು ಆಸ್ತಿ ಜವಾಬ್ದಾರಿ ಪಟ್ಟಿಯಿಂದ ಹೊರಗಿಟ್ಟು ಅನುತ್ಪಾದಕ ಸಾಲಗಳ ಮೊತ್ತವನ್ನು ಕಡಿಮೆಗೊಳಿಸುವ ಕುರಿತು ನಿರ್ಣಯ ಕೈಗೊಳ್ಳುವುದು. ಮುಂದಿನ ದಿನಗಳಲ್ಲಿ ಸದ್ರಿ ಸಾಲಗಳು ವಸೂಲಾದಂತೆ ಮೊತ್ತವನ್ನು ಸಂಘದ ಆದಾಯಕ್ಕೆ ಸೇರಿಸಲಾಗುವುದು. ಸಾಲ ಮನ್ನಾ ಮಾಡಲಾಗುವುದಿಲ್ಲ.

**15 :– ಅಧ್ಯಕ್ಷರ ಅನುಮತಿ ಮೇರೆಗೆ ಇತರ ವಿಷಯಗಳ ಪರಿಶೀಲನೆ ಮತ್ತು ನಿರ್ಣಯ.**

**ಟಿಪ್ಪಣಿ** :– ಸಾಮಾನ್ಯ ಸಭೆಯ ಕಾರ್ಯವ್ಯಾಪ್ತಿಯೊಳಗೆ ಬರಬಹುದಾದ ಇತರ ವಿಷಯಗಳ ಕುರಿತು ಪರಿಶೀಲನೆ ಮತ್ತು ನಿರ್ಣಯ.

## ದಯವಿಟ್ಟು ಗಮನಿಸಿ

1. **ಸಾಮಾನ್ಯ ಸಭೆಯ ಹಾಜರಿ ನೋಂದಣಿ ಸಮಯ ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 12 ಗಂಟೆಯವರೆಗೆ ಇರುವುದು.**

2. 09/09/2018 ರ ಸಾಮಾನ್ಯ ಸಭೆಯು ನಿರ್ಣಯ ನಂಬ್ರ 13 ರಂತೆ ಸಾಮಾನ್ಯ ಸಭೆ ನಡೆಸುವ ರೀತಿ– ನೀತಿ ಹಾಗೂ ನಡಾವಳಿಗಳನ್ನು ಅಂಗೀಕರಿಸಿದ್ದು ಸದ್ರಿ ನಿಯಮಾವಳಿಗಳಂತೆ ಸಭೆಯು ನಡೆಯಲಿದೆ. ಸಭೆ ನಿಗದಿತ ಸಮಯಕ್ಕೆ ಸರಿಯಾಗಿ ಪ್ರಾರಂಭವಾಗಿ ಯಶಸ್ವಿಯಾಗಿ ನಡೆಸಲು ಸರ್ವ ಸದಸ್ಯರ ಸಹಕಾರವನ್ನು ಕೋರಲಾಗಿದೆ. (ಸದ್ರಿ ನಿಯಮಾವಳಿಗಳನ್ನು ಈ ಪುಸ್ತಕದ ಪುಟ ಸಂಖ್ಯೆ 5 ಮತ್ತು 6 ರಲ್ಲಿ ಮುದ್ರಿಸಲಾಗಿದೆ.)

3. ಸದಸ್ಯರ ಹಕ್ಕು ಚಲಾಯಿಸಲು ಅವಶ್ಯಕತೆಗಳು :

ಸದಸ್ಯರ ಹಕ್ಕು ಚಲಾಯಿಸಲು ಉಪವಿಧಿಯಲ್ಲಿ ನಿಗದಿ ಪಡಿಸಿದ ಕನಿಷ್ಠ ವ್ಯವಹಾರ ಮಾಡುವುದು ಹಾಗೂ ಸಾಮಾನ್ಯ ಸಭೆಗೆ ಹಾಜರಾಗುವುದು ಅಗತ್ಯ. ಉಪವಿಧಿ ಪ್ರಕಾರ ಹಿಂದಿನ ಐದು ಸಾಮಾನ್ಯ ಸಭೆಗಳ ಪೈಕಿ ಯಾವುದೇ ಎರಡು ಸಭೆಗಳಿಗೆ ಹಾಜರಾಗಬೇಕು.

ಹಾಗೂ

ಹಿಂದಿನ ಐದು ಸಹಕಾರಿ ವರ್ಷಗಳ ಪೈಕಿ ಯಾವುದೇ 2 ಸಹಕಾರಿ ವರ್ಷಗಳಲ್ಲಿ

1. ಸದಸ್ಯನು ಸಂಘದ ಯಾವುದೇ ರೀತಿಯ ಠೇವಣಿ ಯೋಜನೆಯಲ್ಲಿ (ಪಿಗ್ಮಿ ಹೊರತುಪಡಿಸಿ) ಕನಿಷ್ಠ ರೂ. 10,000.00ವನ್ನು ಒಂದು ವರ್ಷವಾದರೂ ತೊಡಗಿಸಿರಬೇಕು. ಇಂತಹ ಠೇವಣಿಯನ್ನು ಸಂಘದ ಸಾಮಾನ್ಯ ಸಭೆಯ ದಿನಾಂಕದ ಅಥವಾ ಚುನಾವಣೆಯ ದಿನಾಂಕದ 365 ದಿನಗಳ ಮೊದಲು ತೊಡಗಿಸಿರಬೇಕು.

ಅಥವಾ

ಕನಿಷ್ಠ ರೂ. 10,000/– (ರೂಪಾಯಿ ಹತ್ತು ಸಾವಿರ ಮಾತ್ರ) ಸಾಲ ಮಾಡಿ ಸುಸ್ತಿಯಾಗುವ ಮೊದಲೇ ಬಡ್ಡಿ ಸಮೇತ ತೀರುವಳಿ ಮಾಡಿರಬೇಕು ಹಾಗೂ ಸಾಲದ ಖಾತೆ ಮುಕ್ತಾಯವಾಗದಿದ್ದಲ್ಲಿ ಸಾಲ ಮರುಪಾವತಿ ಕ್ರಮಬದ್ಧವಾಗಿರಬೇಕು. ಸಾಲವನ್ನು ಸಂಘದ ಸಾಮಾನ್ಯ ಸಭೆಯ ದಿನಾಂಕದ ಅಥವಾ ಚುನಾವಣೆಯ ದಿನಾಂಕದ 365 ದಿನಗಳ ಮೊದಲು ಪಡೆದಿರಬೇಕು.

ಮೇಲೆ ವಿವರಿಸಿರುವ ಕನಿಷ್ಠ ವ್ಯವಹಾರ ಮಾಡದಿದ್ದಲ್ಲಿ ಹಾಗೂ ಹಿಂದಿನ ಐದು ಸಹಕಾರಿಯ ವರ್ಷಗಳಲ್ಲಿ ಯಾವುದೇ ಎರಡು ಸಾಮಾನ್ಯ ಸಭೆಗಳಿಗೆ ಹಾಜರಾಗದಿದ್ದರೆ ಅಂತಹ ಸದಸ್ಯರು ಸಂಘದ ಮಹಾಸಭೆಯಲ್ಲಿ ಭಾಗವಹಿಸುವ, ಮತದಾನ ಮಾಡುವ ಮತ್ತು ಆಡಳಿತ ಮಂಡಳಿ ಚುನಾವಣೆಯಲ್ಲಿ ಮತದಾನ ಮಾಡುವ ಹಕ್ಕನ್ನು ಮುಂದಿನ ಒಂದು ವರ್ಷದ ವರೆಗೆ ಕಳೆದುಕೊಳ್ಳುತ್ತಾರೆ.

## 09-09-2018 ರಂದು ನಡೆದ ಸಂಘದ 98 ನೇ ಸಾಮಾನ್ಯ ಸಭೆಯಲ್ಲಿ ನಿರ್ಣಯ ನಂಬ್ರ 13ರಂತೆ ಅಂಗೀಕೃತವಾದ
## ಸಾಮಾನ್ಯ ಸಭೆ ನಡೆಸುವ ಕುರಿತ ನೀತಿ ಹಾಗೂ ನಡಾವಳಿಗಳು

### ಭಾಗ - 1

1. ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997 ರಂತೆ ಪ್ರತಿ ವರ್ಷ ಸೆಪ್ಟೆಂಬರ್ 25 ರೊಳಗೆ ಸಂಘದ ಸಾಮಾನ್ಯ ಸಭೆ ನಡೆಸತಕ್ಕದ್ದು.
2. ಸಾಮಾನ್ಯ ಸಭೆಗೆ 15 ಪೂರ್ಣ ದಿನಗಳ ನೋಟೀಸನ್ನು ಎಲ್ಲಾ ಅರ್ಹ ಸದಸ್ಯರಿಗೆ ನೀಡತಕ್ಕದ್ದು, ಯಾವುದೇ ಸಾಮಾನ್ಯ ಸಭೆಯಲ್ಲಿ ಉಪವಿಧಿಯ ತಿದ್ದುಪಡಿ ಇದ್ದಲ್ಲಿ 20 ಪೂರ್ಣ ದಿನಗಳ ನೋಟೀಸನ್ನು ಅರ್ಹ ಸದಸ್ಯರಿಗೆ ನೀಡತಕ್ಕದ್ದು.
3. ಸಾಮಾನ್ಯ ಸಭೆಯ ನೋಟೀಸನ್ನು ನಿಯಮಗಳಂತೆ ಕಳುಹಿಸತಕ್ಕದ್ದು.
4. ಸಾಮಾನ್ಯ ಸಭೆಯಲ್ಲಿ ಭಾಗವಹಿಸುವವರಿಗೆ ಸಂಘವು ನೀಡಿದ ಗುರುತಿನ ಚೀಟಿ ಕಡ್ಡಾಯ, ಗುರುತಿನ ಚೀಟಿ ಇಲ್ಲದ ಸದಸ್ಯರಿಗೆ ಸಭೆಯಲ್ಲಿ ಭಾಗವಹಿಸಲು ಅವಕಾಶವಿರತಕ್ಕದ್ದಲ್ಲ.
5. ಸಭೆಯಲ್ಲಿ ಸದಸ್ಯರು ಮಾತ್ರ ಭಾಗವಹಿಸತಕ್ಕದ್ದು, ಸದಸ್ಯರೊಂದಿಗೆ ಯಾವುದೇ ಜೊತೆಗಾರರಿದ್ದಲ್ಲಿ ಅಂತಹ ಜೊತೆಗಾರರಿಗೆ ಸಭೆಯಲ್ಲಿ ಭಾಗವಹಿಸುವ ಅವಕಾಶವಿರುವುದಿಲ್ಲ. ಸಾಮಾನ್ಯ ಸಭೆಯಲ್ಲಿ ಪ್ರೇಕ್ಷಕರಿಗೆ ಪ್ರವೇಶವಿರುವುದಿಲ್ಲ.
6. ಸಾಮಾನ್ಯ ಸಭೆಯ ನೋಟೀಸಿನ ಜೊತೆಗೆ ಸಭೆಯಲ್ಲಿ ಚರ್ಚಿಸಲಾಗುವ ವಿಷಯಗಳ ಟಿಪ್ಪಣಿಯನ್ನು ಸಹ ನೀಡತಕ್ಕದ್ದು.
7. ನೋಟೀಸಿನಲ್ಲಿ ನಮೂದಿಸಿದ ಸಮಯದಿಂದ ಒಂದು ಗಂಟೆಯವರೆಗೆ ಕೋರಂಗೆ ಅಗತ್ಯವಿರುವ ಸಂಖ್ಯೆಯ ಸದಸ್ಯರು ಹಾಜರಿರದಿದ್ದಲ್ಲಿ ಸಭೆಯನ್ನು ಮುಂದೂಡತಕ್ಕದ್ದು.
8. ಪ್ರಾರ್ಥನೆ, ಸ್ವಾಗತ, ಪರಿಚಯ ಮುಂತಾದ ಕಾರ್ಯಕ್ರಮಗಳ ನಂತರ ಸಾಮಾನ್ಯ ಸಭೆಯ ಕಾರ್ಯಕಲಾಪಗಳು ಅಧ್ಯಕ್ಷರ ಭಾಷಣದಿಂದ ಆರಂಭವಾಗತಕ್ಕದ್ದು.

### ಸಭೆಯಲ್ಲಿ ವಿಷಯ ಪ್ರಸ್ತಾವನೆ, ಪ್ರಶ್ನೆ ಕೇಳುವುದು ಇತ್ಯಾದಿ

### ಭಾಗ - 2

1. ಸಾಮಾನ್ಯ ಸಭೆಯಲ್ಲಿ ಚರ್ಚಿತವಾಗುವ ವಿಷಯದ ಕುರಿತು ನೀಡಲಾದ ಟಿಪ್ಪಣಿಗಳ ಬಗ್ಗೆ ವಾರ್ಷಿಕ ವರದಿ, ಮುಂಗಡ ಪತ್ರ, ಲೆಕ್ಕ ಪರಿಶೋಧನಾ ವರದಿ, ಕಾರ್ಯ ಯೋಜನೆ ಇತ್ಯಾದಿ ಯಾವುದೇ ವಿಷಯದ ಬಗ್ಗೆ ಪ್ರಶ್ನೆ, ಅನುಮಾನ, ಸಂದೇಹ, ಸಲಹೆಗಳಿದ್ದಲ್ಲಿ ಸಭೆಯ ದಿನಾಂಕದ 7 ದಿನ ಮೊದಲು ಸಂಘದ ಪ್ರಧಾನ ಕಚೇರಿಗೆ ತಲುಪುವಂತೆ ಲಿಖಿತವಾಗಿ ಪ್ರಶ್ನೆ ಬರೆದು ಕಳುಹಿಸತಕ್ಕದು. ಹಾಗೂ ಬರೆದು ಕಳುಹಿಸಲಾದ ಲಿಖಿತ ಪ್ರಶ್ನೆಗೆ ಸಭೆಯಲ್ಲಿ ಉತ್ತರಿಸತಕ್ಕದ್ದು. ಅಧ್ಯಕ್ಷರ ಉತ್ತರದ ನಂತರ ಪ್ರಶ್ನೆ ಕೇಳಿದ ಸದಸ್ಯರಿಗೆ ಒಂದು ಪೂರಕ ಪ್ರಶ್ನೆ ಕೇಳಲು ಮಾತ್ರ ಅವಕಾಶವಿರತಕ್ಕದ್ದು.

2. ಸಭೆಯ ನೋಟೀಸಿನಲ್ಲಿ ನಮೂದಿಸದ ಇನ್ನಾವುದೇ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚೆಯ ಅಗತ್ಯವಿದೆ ಎಂದು ಯಾವುದೇ ಸದಸ್ಯರು ಭಾವಿಸಿದ್ದಲ್ಲಿ ಅಂತಹ ವಿಷಯವನ್ನು ಸಭೆಯ ದಿನಾಂಕದ 7 ದಿನದ ಮೊದಲು ಸಂಘದ ಪ್ರಧಾನ ಕಚೇರಿಗೆ ತಲುಪುವಂತೆ ವಿವರವಾಗಿ ಬರೆದು ಕಳುಹಿಸಿದಲ್ಲಿ ಅಂತಹ ವಿಷಯವು ಅಧ್ಯಕ್ಷರ ಅನುಮತಿ ಮೇರೆಗೆ ಚರ್ಚಿಸಲಾಗುವ ಇತರ ವಿಷಯಗಳಡಿ ಚರ್ಚೆಗೆ ಅರ್ಹವಾಗಿದೆ ಎಂದು ಭಾವಿಸಿದಲ್ಲಿ ಅಂತಹ ವಿಷಯದ ಬಗ್ಗೆ ಟಿಪ್ಪಣಿ ತಯಾರಿಸಿ ಸಭೆ ಪ್ರಾರಂಭವಾಗುವ ಮುನ್ನ ಎಲ್ಲಾ ಸದಸ್ಯರಿಗೂ ನೀಡತಕ್ಕದ್ದು, ಪ್ರಶ್ನೆ ಕೇಳಿದ ಸದಸ್ಯರಿಗೆ ವಿಷಯವನ್ನು ಮಂಡಿಸಲು ಅವಕಾಶ ನೀಡತಕ್ಕದ್ದು. ಅಂತಹ ವಿಷಯದ ಬಗ್ಗೆ ಒಂದು ಪೂರಕ ಪ್ರಶ್ನೆ ಕೇಳಲು ಮಾತ್ರ ಅವಕಾಶವಿರತಕ್ಕದ್ದು.

3. ಲಿಖಿತವಾಗಿ ವಿಷಯ ಚರ್ಚೆ ಮಾಡಲು ಕೋರಿ ಬರೆದವರ ಹೊರತು ಬೇರೆಯವರಿಗೆ ಸಭೆಯಲ್ಲಿ ಮಾತನಾಡಲು ಅವಕಾಶವಿರತಕ್ಕದಲ್ಲ.

4. ಸಾಮಾನ್ಯ ಸಭೆ ನಡೆಯುವ 7 ದಿನಗಳ ಒಳಗೆ ಸೌಹಾರ್ದ ಕಾಯ್ದೆ ಸಹಕಾರಿಗೆ ಸಂಬಂಧಿಸಿದ ಯಾವುದೇ ಮಹತ್ವಪೂರ್ಣ ಘಟನೆ ನಡೆದಿದ್ದರೆ ಅಂತಹ ವಿಷಯಗಳ ಬಗ್ಗೆ ಸಾಮಾನ್ಯ ಸಭೆಯಲ್ಲಿ ಚರ್ಚಿಸುವ ಅಗತ್ಯವಿದೆಯೆಂದು ಯಾವುದೇ ಸದಸ್ಯರು ಭಾವಿಸಿದಲ್ಲಿ ಸಭೆಯ ಪ್ರಾರಂಭದ ಒಂದು ಗಂಟೆ ಮೊದಲು ಅಂತಹ ವಿಷಯವನ್ನು ಲಿಖಿತವಾಗಿ ಸಂಘದ ಮುಖ್ಯ ಕಾರ್ಯನಿರ್ವಾಹಕರಿಗೆ ಸಲ್ಲಿಸತಕ್ಕದ್ದು. ಹಾಗೆ ಸಲ್ಲಿಸಿದ ವಿಷಯವು ಸಾಮಾನ್ಯ ಸಭೆಯಲ್ಲಿ ಚರ್ಚಿತವಾಗುವ ವಿಷಯವೆಂದು ಅಧ್ಯಕ್ಷರು ಅಭಿಪ್ರಾಯಪಟ್ಟಲ್ಲಿ ಅಂತಹ ವಿಷಯವನ್ನು ಸಾಮಾನ್ಯ ಸಭೆಯಲ್ಲಿ ಚರ್ಚಿಸಬಹುದು ಅಥವಾ ಅಂತಹ ವಿಷಯಕ್ಕೆ ಸಭೆಯಲ್ಲಿ ಸೂಕ್ತ ವಿವರಣೆ ನೀಡತಕ್ಕದ್ದು.

5. ಸಾಮಾನ್ಯ ಸಭೆಯ ಆರಂಭಕ್ಕೆ ನೋಟೀಸಿನಲ್ಲಿ ಕಾಣಿಸಿದ ಒಂದೊಂದೇ ವಿಷಯಗಳ ಪ್ರಸ್ತಾವನೆಯನ್ನು ಮಾಡುತ್ತಾ ಟಿಪ್ಪಣಿಯಲ್ಲಿ ನೀಡಲಾದ ವಿವರಣೆಗಳನ್ನು ಸಭೆಯ ಮುಂದಿಡತಕ್ಕದ್ದು, ಪ್ರಸ್ತಾವಿಸಲಾದ ವಿಷಯಗಳ ಬಗ್ಗೆ ಯಾವುದೇ ಸದಸ್ಯ ಪ್ರಶ್ನೆ ಕೇಳಿದ್ದಲ್ಲಿ ಅದರ ಬಗ್ಗೆ ವಿವರಣೆಯನ್ನು ಸಹ ಸಭೆಯ ಮುಂದಿಡತಕ್ಕದ್ದು, ಪ್ರಶ್ನೆ ಕೇಳಿದ ಸದಸ್ಯನೇ ಸಭೆಯ ಎದುರು ಆತನು ಲಿಖಿತವಾಗಿ ಕೇಳಿದ ಪ್ರಶ್ನೆಯನ್ನಿಡುವುದು ಸೂಕ್ತ ಎಂದು ಅಧ್ಯಕ್ಷರು ಭಾವಿಸಿದಲ್ಲಿ ಅಂತಹ ಸದಸ್ಯನಿಗೆ ಪ್ರಶ್ನೆಯನ್ನು ಓದಲು ಅವಕಾಶ ನೀಡಬಹುದು.

6. ಸಭೆಯಲ್ಲಿ ಮಂಡಿಸಲಾದ ಎಲ್ಲಾ ವಿಷಯಗಳು ಮುಕ್ತಾಯಗೊಂಡ ನಂತರ ಅಧ್ಯಕ್ಷರು ಅಧೀಕೃತವಾಗಿ ಸಭೆ ಮುಕ್ತಾಯಗೊಂಡ ಘೋಷಣೆ ಮಾಡತಕ್ಕದ್ದು.

7. ಸಭೆಯಲ್ಲಿ ಭಾಗವಹಿಸಿದ ಎಲ್ಲಾ ಸದಸ್ಯರಿಗೂ ಹಾಜರಾತಿ ಪ್ರಮಾಣ ಪತ್ರವನ್ನು ನೀಡತಕ್ಕದ್ದು.

# ಸದಸ್ಯರ ಗಮನಕ್ಕೆ

1. ಸಾಮಾನ್ಯ ಸಭೆಯಲ್ಲಿ ಚರ್ಚಿತವಾಗುವ ವಿಷಯದ ಕುರಿತು ನೀಡಲಾದ ಟಿಪ್ಪಣಿಗಳ ಬಗ್ಗೆ, ವಾರ್ಷಿಕ ವರದಿ, ಮುಂಗಡ ಪತ್ರ, ಲೆಕ್ಕ ಪರಿಶೋಧನಾ ವರದಿ, ಕಾರ್ಯಯೋಜನೆ ಇತ್ಯಾದಿ ಸಭೆಯಲ್ಲಿ ಚರ್ಚಿಸಬಹುದಾದ ಯಾವುದೇ ವಿಷಯಗಳ ಬಗ್ಗೆ ಪ್ರಶ್ನೆ, ಸಂದೇಹ, ಅಸಮಾಧಾನ, ಅಥವಾ ಸಲಹೆಗಳಿದ್ದರೆ ದಿನಾಂಕ 30–08–2025 ನೇ ಶನಿವಾರ ಅಪರಾಹ್ನ 4 ಗಂಟೆಯೊಳಗೆ ಸಂಘದ ಪ್ರಧಾನ ಕಚೇರಿಗೆ ತಲುಪುವಂತೆ ಲಿಖಿತವಾಗಿ ಪ್ರಶ್ನೆ ಕಳುಹಿಸಬಹುದು.
   [2024–25ನೇ ಸಹಕಾರ ವರ್ಷಕ್ಕೆ ಸಂಬಂಧಿಸಿದ ವಿಷಯಗಳು ಮಾತ್ರ]

2. ಸಭೆ ನಡೆಯುವಾಗ ದಯವಿಟ್ಟು ಕಾರ್ಯಸೂಚಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಮಾತ್ರ ಕೇಳಿ. ಇತರ ವಿಷಯಗಳ ಬಗ್ಗೆ ಸಭೆಯ ಕೊನೆಯಲ್ಲಿ ಅಧ್ಯಕ್ಷರ ಅನುಮತಿ ಮೇರೆಗೆ ಚರ್ಚಿಸಲು ಅವಕಾಶ ನೀಡಲಾಗುವುದು.

3. 2021–22ನೇ ಸಾಲಿನ ಪಾಲು ಮುನಾಫೆಯನ್ನು ಇದುವರೆಗೆ ಪಡೆಯದಿರುವ ಸದಸ್ಯರು ದಿನಾಂಕ 30–09–2025 ರೊಳಗೆ ಪಡೆದುಕೊಳ್ಳಬೇಕಾಗಿ ವಿನಂತಿ. ಪಡೆಯದಿದ್ದಲ್ಲಿ ಆ ಮೊತ್ತವನ್ನು ದಿನಾಂಕ 03–10–2025 ರಂದು ಯಾ ಸಂಘಕ್ಕೆ ಸೂಕ್ತವೆನಿಸಿದ ಮುಂದಿನ ದಿನಗಳಲ್ಲಿ ಸಂಘದ ಕ್ಷೇಮ ನಿಧಿಗೆ ಜಮಾ ಮಾಡಲಾಗುವುದು. ಈ ಬಗ್ಗೆ ಪ್ರತ್ಯೇಕ ಸೂಚನಾ ಪತ್ರವನ್ನು ಯಾ ಮಾಹಿತಿಯನ್ನು ನೀಡಲಾಗುವುದಿಲ್ಲ. ಹಾಗೂ ಒಮ್ಮೆ ಕ್ಷೇಮ ನಿಧಿಗೆ ಜಮಾ ಮಾಡಲಾದ ಪಾಲು ಮುನಾಫೆಯನ್ನು ಮತ್ತೆ ಸದಸ್ಯರಿಗೆ ಪಾವತಿಸಲು ಸಾಧ್ಯವಾಗುವುದಿಲ್ಲ.

4. ಕಳೆದ 6 ವರ್ಷಗಳಿಂದೀಚೆಗೆ ಸದಸ್ಯರಾದ ಬಹುತೇಕ ಸದಸ್ಯರ ಪಾಲು ಪ್ರಮಾಣ ಪತ್ರ (ಷೇರ್ ಸರ್ಟಿಫಿಕೇಟ್) ಸಂಘದ ಪ್ರಧಾನ ಕಚೇರಿಯಲ್ಲಿದ್ದು ಸದಸ್ಯರು ಪಡೆದುಕೊಳ್ಳಬೇಕಾಗಿ ವಿನಂತಿ. ನೋಂದಾಯಿತ ಅಂಚೆ ಮೂಲಕ ಕಳುಹಿಸಲು ಅಂಚೆ ವೆಚ್ಚ ದುಬಾರಿಯಾಗುವುದರಿಂದ ತಾವೇ ಪ್ರಧಾನ ಕಚೇರಿಗೆ ಅಥವಾ ಶಾಖೆಗೆ ಭೇಟಿ ನೀಡಿ ಪಡೆದುಕೊಳ್ಳಬೇಕಾಗಿ ವಿನಂತಿ.

5. ಸದಸ್ಯರ ಎಲ್ಲಾ ವ್ಯವಹಾರಗಳಿಗೆ ಉಚಿತ WhatsApp ಸಂದೇಶ ಸೌಲಭ್ಯವಿದ್ದು ಸದಸ್ಯರು ತಮ್ಮ WhatsApp ಮೊಬೈಲ್ ಸಂಖ್ಯೆಯನ್ನು ನೀಡಿ ಸಹಕರಿಸಬೇಕು. ಈಗಾಗಲೇ ನೀಡಲಾದ ನಿಮ್ಮ ಮೊಬೈಲ್ ಸಂಖ್ಯೆಯಲ್ಲಿ ಬದಲಾವಣೆಯಿದ್ದಲ್ಲಿ ನೂತನ ಸಂಖ್ಯೆಯನ್ನು ಸಂಘಕ್ಕೆ ನೀಡಬೇಕಾಗಿ ವಿನಂತಿ.

## 15–09–2024 ನೇ ಆದಿತ್ಯವಾರ ನಡೆದ ಸಂಘದ 104 ನೇ ಸಾಮಾನ್ಯ ಸಭೆಯ ನಡಾವಳಿಗಳು

ಸಂಘದ 104 ನೇ ಸಾಮಾನ್ಯ ಸಭೆಯು ಅಧ್ಯಕ್ಷರಾದ ಶ್ರೀ ಜಿ. ವೆಂಕಟೇಶ್ ಶೆಣೈಯವರ ಅಧ್ಯಕ್ಷತೆಯಲ್ಲಿ ದಿನಾಂಕ 15 ಸಪ್ಟಂಬರ್ 2024 ನೇ ಆದಿತ್ಯವಾರ ಪೂರ್ವಾಹ್ನ ಗಂಟೆ 11.10 ಕ್ಕೆ ಸರಿಯಾಗಿ ಗಂಗೊಳ್ಳಿಯ ಶ್ರೀ ವಿಠಲ ರಕುಮಾಯಿ ದೇವಸ್ಥಾನದ ಶ್ರೀ ವೀರ ವಿಠಲ ಸಭಾಗೃಹದಲ್ಲಿ ಜರಗಿತು. ಸಭೆಯಲ್ಲಿ ಒಟ್ಟು 551 ಸದಸ್ಯರು ಭಾಗವಹಿಸಿದ್ದರು. ಸಂಘದ ನಿರ್ದೇಶಕರಾದ ಶ್ರೀ ಕೆ. ಗೋಪಾಲಕೃಷ್ಣ ನಾಯಕ್ ಆಗಮಿಸಿದ ಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು. ನಿರ್ದೇಶಕ ಶ್ರೀ ಬಿ. ರಾಘವೇಂದ್ರ ಪೈ ನಿರೂಪಿಸಿದ ಕಾರ್ಯಕ್ರಮದಲ್ಲಿ ನಿರ್ದೇಶಕ ಶ್ರೀ ಕೆ. ಪರಮೇಶ್ವರ ನಾಯಕ್ ನುಡಿ ನಮನ ಸಲ್ಲಿಸಿದರು. ಅಧ್ಯಕ್ಷರ ಭಾಷಣದೊಂದಿಗೆ ಸಭೆ ಆರಂಭವಾಯಿತು.

**ಸಭೆಯಲ್ಲಿ ಈ ಕೆಳಗಿನ ಸರ್ವಾನುಮತದ ನಿರ್ಣಯಗಳನ್ನು ಕೈಗೊಳ್ಳಲಾಯಿತು.**

**ವಿಷಯ 1 :– 104 ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲಿಸುವುದು.**

**ನಿರ್ಣಯ :–** 104 ನೇ ಸಾಮಾನ್ಯ ಸಭೆಯ ಸೂಚನಾ ಪತ್ರವನ್ನು ಸಭೆಯಲ್ಲಿ ಓದಲಾಯಿತು. ಸಾಮಾನ್ಯ ಸಭೆಯ 36 ಪುಟಗಳುಳ್ಳ ಒಟ್ಟು 3687 ನೋಟೀಸನ್ನು ಎಲ್ಲಾ "ಅ" ವರ್ಗದ ಸದಸ್ಯರಿಗೆ ತಾ.29/08/2024 ರಂದು ಕುಂದಾಪುರದ ಪ್ರಧಾನ ಅಂಚೆ ಕಚೇರಿಯಿಂದ ಬಹುಪ್ರಮಾಣದ ಅಂಚೆ ಮೂಲಕ ಕಳುಹಿಸಲಾಗಿದ್ದು, ತಾ.30/08/2024 ನೇ ವಿಜಯವಾಣಿ ದಿನ ಪತ್ರಿಕೆಯ ಮಂಗಳೂರು ಆವೃತ್ತಿಯ ಪುಟ ಸಂಖ್ಯೆ 2 ರಲ್ಲಿ ಸಾಮಾನ್ಯ ಸಭೆಯ ಬಗ್ಗೆ ಪ್ರಕಟಣೆ ನೀಡಲಾಗಿದ್ದು, ದಿನಾಂಕ 04–09–2024 ರಂದು ಎಲ್ಲಾ ಸದಸ್ಯರಿಗೆ ಸಂಘದಲ್ಲಿ ನೋಂದಾಯಿಸಲ್ಪಟ್ಟ ಮೊಬೈಲ್ ಸಂಖ್ಯೆಗಳಿಗೆ ಕನ್ನಡ ಭಾಷೆಯಲ್ಲಿ ಎಸ್.ಎಮ್.ಎಸ್. ಸಂದೇಶವನ್ನು ಕಳುಹಿಸಲಾಗಿದ್ದು, ದಿನಾಂಕ 23–08–2024 ರಂದು ಸಂಘದ ವೆಬ್ ಸೈಟ್‌ನಲ್ಲಿಯೂ ಸಾಮಾನ್ಯ ಸಭೆಯ ಸೂಚನಾ ಪತ್ರವನ್ನು ಪ್ರಕಟಿಸಲಾಗಿದೆ ಎಂದು ನಿರ್ದೇಶಕ ಶ್ರೀ ಬಿ. ರಾಘವೇಂದ್ರ ಪೈ ಸಭೆಗೆ ತಿಳಿಸಿದರು. ನಿರ್ದೇಶಕರ ವಿವರಣೆಯನ್ನು ಒಪ್ಪಿದ ಸಭೆಯು ದಿನಾಂಕ 29/08/2024 ರಂದು ಕುಂದಾಪುರದ ಪ್ರಧಾನ ಅಂಚೆ ಕಚೇರಿಯಿಂದ ಸಾಮಾನ್ಯ ಅಂಚೆ ಮೂಲಕ ರಶೀದಿ ಸಂಖ್ಯೆ 172491350586 ರಂತೆ "ಅ" ವರ್ಗದ ಸದಸ್ಯರು ಹಾಗೂ ವಿವಿಧ ಇಲಾಖೆಗಳಿಗೆ ಕಳುಹಿಸಲಾದ ಸಂಘದ 104 ನೇ ಸಾಲಿನ 36 ಪುಟಗಳುಳ್ಳ ಸಾಮಾನ್ಯ ಸಭೆಯ ಸೂಚನಾ ಪತ್ರವನ್ನು ಅಂಗೀಕರಿಸಲು ಸರ್ವಾನುಮತದಿಂದ ಅನುಮತಿ ನೀಡಿತು.

**ವಿಷಯ 2 :– 10–09–2023 ರಂದು ನಡೆದ 103 ನೇ ಸಾಮಾನ್ಯ ಸಭೆಯ ನಡವಳಿಕೆಗಳನ್ನು ದೃಢೀಕರಿಸುವುದು.**

**ನಿರ್ಣಯ :–** 10–09–2023 ರಂದು ನಡೆದ 103 ನೇ ಸಾಮಾನ್ಯ ಸಭೆಯ ನಡವಳಿಕೆಗಳನ್ನು ಸಾಮಾನ್ಯ ಸಭೆಯ ಪುಸ್ತಕದ ಪುಟ ಸಂಖ್ಯೆ 7 ರಿಂದ 11 ರವರೆಗೆ ನೀಡಲಾಗಿದ್ದು ಸದಸ್ಯರು ಬಯಸಿದ್ದಲ್ಲಿ ನಿರ್ದೇಶಕ ಶ್ರೀ ಜಿ. ವೆಂಕಟೇಶ್ ನಾಯಕ್ ಸಭೆಯಲ್ಲಿ ಓದಲಿದ್ದಾರೆಂದು ನಿರ್ದೇಶಕ ಶ್ರೀ ಬಿ. ರಾಘವೇಂದ್ರ ಪೈ ಸಭೆಗೆ ತಿಳಿಸಿದರು. ನಡಾವಳಿಗಳನ್ನು ಪುಸ್ತಕದಲ್ಲಿ ಮುದ್ರಿಸಿರುವುದರಿಂದ ಪುನಃ ಓದುವ ಅಗತ್ಯವಿಲ್ಲವೆಂದು ತಿಳಿಸಿದ ಸಭೆಯು ಸಾಮಾನ್ಯ ಸಭೆಯ ನೋಟೀಸಿನ ಪುಟ ಸಂಖ್ಯೆ 7 ರಿಂದ 11 ರ ವರೆಗಿನ ಒಟ್ಟು 5 ಪುಟಗಳ, ತಾ. 10–09–2023 ರಂದು ನಡೆದ ಸಹಕಾರಿಯ 103 ನೇ ಸಾಮಾನ್ಯ ಸಭೆಯ ನಡವಳಿಕೆಗಳನ್ನು ದೃಢೀಕರಿಸಲು ಸಭೆಯು ಸರ್ವಾನುಮತದಿಂದ ಅನುಮತಿ ನೀಡಿತು.

**ವಿಷಯ 3 :– 2023–2024 ನೇ ಸಾಲಿನ ಆಡಳಿತ ಮಂಡಳಿ ವರದಿಯ ಅನುಮೋದನೆ.**

**ನಿರ್ಣಯ :–** ಸಂಘದ 2023–2024 ನೇ ಸಾಲಿನ ಆಡಳಿತ ಮಂಡಳಿ ವರದಿಯನ್ನು ಸಾಮಾನ್ಯ ಸಭೆಯ ಪುಸ್ತಕದ ಪುಟ ಸಂಖ್ಯೆ 12 ರಿಂದ 18 ರವರೆಗೆ ನೀಡಲಾಗಿದ್ದು ಸದಸ್ಯರು ಬಯಸಿದ್ದಲ್ಲಿ ನಿರ್ದೇಶಕ ಶ್ರೀ ಕೆ. ಪರಮೇಶ್ವರ ನಾಯಕ್ ಸಭೆಯಲ್ಲಿ ಮಂಡಿಸಲಿರುವುದಾಗಿ ನಿರ್ದೇಶಕ ಶ್ರೀ ಬಿ. ರಾಘವೇಂದ್ರ ಪೈ ಸಭೆಗೆ

ತಿಳಿಸಿದರು. ಪುಸ್ತಕದಲ್ಲಿ ಮುದ್ರಿಸಿರುವುದರಿಂದ ಪುನಃ ಓದುವ ಅಗತ್ಯವಿಲ್ಲವೆಂದು ತಿಳಿಸಿದ ಸಭೆಯು ಸಾಮಾನ್ಯ ಸಭೆಯ ನೋಟೀಸಿನ ಪುಟ ಸಂಖ್ಯೆ 12 ರಿಂದ 18 ರ ವರೆಗೆ ಸವಿವರವಾಗಿ ನೀಡಲಾದ 2023–2024 ನೇ ಸಾಲಿನ ಆಡಳಿತ ಮಂಡಳಿ ವರದಿಯನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 4 :– 2023–24ನೇ ಸಾಲಿನ ಲೆಕ್ಕ ಪರಿಶೋಧನಾ ಹಾಗೂ ಅನುಪಾಲನಾ ವರದಿಯ ಅನುಮೋದನೆ.**
**ನಿರ್ಣಯ :–** ಸಂಘದ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಎ. ಸುದರ್ಶನ್ ಪೈ, ಲೆಕ್ಕ ಪರಿಶೋಧಕರು, ಕೋಟೇಶ್ವರ, ಕುಂದಾಪುರ ತಾಲೂಕು ಇವರು ನೀಡಿದ 2023–2024 ನೇ ಸಾಲಿನ 124 ಪುಟಗಳ ಲೆಕ್ಕ ಪರಿಶೋಧನಾ ವರದಿ ಹಾಗೂ ಆಡಳಿತ ಮಂಡಳಿಯು ತಯಾರಿಸಿದ ಸಾಮಾನ್ಯ ಸಭೆಯ ನೋಟೀಸಿನ ಪುಟ ಸಂಖ್ಯೆ 19 ಮತ್ತು 20 ರಲ್ಲಿ ಸವಿವರವಾಗಿ ನೀಡಲಾದ ಅನುಪಾಲನಾ ವರದಿಯನ್ನು ನಿರ್ದೇಶಕ ಶ್ರೀ ಬಿ. ರಾಘವೇಂದ್ರ ಪೈ ಸಭೆಯಲ್ಲಿ ಮಂಡಿಸಿದರು. ವರದಿಯ ಬಗ್ಗೆ ಸಮಗ್ರ ಚರ್ಚೆ ನಡೆದ ಬಳಿಕ ಲೆಕ್ಕಪರಿಶೋಧನಾ ವರದಿ ಹಾಗೂ ಅನುಪಾಲನಾ ವರದಿಯನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

**ವಿಷಯ 5 :– 2023–24ನೇ ಸಾಲಿನ ನಿವ್ವಳ ಲಾಭದ ವಿಂಗಡಣೆ.**
**ನಿರ್ಣಯ :–** ಆಡಳಿತ ಮಂಡಳಿಯು ಶಿಫಾರಸು ಮಾಡಿರುವ ನಿವ್ವಳ ಲಾಭದ ವಿಂಗಡಣೆಯನ್ನು ನಿರ್ದೇಶಕ ಶ್ರೀ ಬಿ. ರಾಘವೇಂದ್ರ ಪೈ ಸಭೆಯಲ್ಲಿ ಮಂಡಿಸಿದರು. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಪ್ರಕರಣ 10(21) ಹಾಗೂ ಉಪವಿಧಿಗಳ ಪ್ರಕಾರ ದಿನಾಂಕ 19–08–2024 ರಂದು ನಡೆದ ಆಡಳಿತ ಮಂಡಳಿ ಸಭೆಯು ನಿರ್ಣಯ ಸಂಖ್ಯೆ 65/24–25 ರಂತೆ ಮಾಡಿದ ಶಿಫಾರಸನ್ನು ಅಂಗೀಕರಿಸಿದ ಸಭೆಯು ನಿವ್ವಳ ಲಾಭ **ರೂ. 1,09,09,922.46/–** ನ್ನು ಈ ಕೆಳಗಿನಂತೆ ವಿಲೇವಾರಿ ಮಾಡಲು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.

| ಕ್ರ. ಸಂ | ಲಾಭ ವಿಂಗಡಣೆಯ ವಿವರ | ಎಷ್ಟು | ಮೊತ್ತ ರೂ. |
|---|---|---|---|
| 1. | ಮೀಸಲು ನಿಧಿ | 25% | 27,27,481.00 |
| 2. | ಸಹಕಾರಿ ಶಿಕ್ಷಣ ನಿಧಿ | 2% | 2,18,198.00 |
| 3. | ಸಹಕಾರಿ ಅಕಾಡೆಮಿ ಮೈಸೂರು ನಿಧಿಗೆ | 0.5% | 54,550.00 |
| 4. | ಕಾರ್ಯಾಚರಣೆ ಮೀಸಲು ನಿಧಿಗೆ | 10% | 10,90,992.00 |
| 5. | ಸಾಮಾನ್ಯ ಕ್ಷೇಮ ನಿಧಿಗೆ | 5% | 5,45,496.00 |
| 6. | ಸಿಬ್ಬಂದಿ ಬೋನಸ್ಸು | 2 ತಿಂಗಳ ವೇತನ | 9,41,419.00 |
| 7. | 'ಅ' ವರ್ಗದ ಲಾಭಾಂಶ | 17% | 38,59,088.00 |
| | 'ಬ' ವರ್ಗದ ಲಾಭಾಂಶ | 17% | 1,19,458.00 |
| 8. | ಪಾಲು ಮುನಾಫೆ ಸಮೀಕರಣ ನಿಧಿ | 2% | 2,18,198.00 |
| 9. | ಸಾರ್ವಜನಿಕ ಉಪಕಾರ ನಿಧಿ | 2% | 2,18,198.00 |
| 10. | ಕಟ್ಟಡ ನಿಧಿಗೆ | 4% | 4,36,397.00 |
| 11. | ಸಿಬ್ಬಂದಿ/ಸದಸ್ಯರ ಕ್ಷೇಮ ನಿಧಿ | 2% | 2,18,198.00 |
| 12. | ಸದಸ್ಯರ ಶಿಕ್ಷಣ ನಿಧಿ | 2% | 2,18,198.00 |
| 13. | ಉಳಿದ ಮೊಬಲಗು ಮೀಸಲು ನಿಧಿಗೆ | | 44,051.46 |
| | | **ಒಟ್ಟು ಮೊತ್ತ ರೂ.** | **1,09,09,922.46** |

**ವಿಷಯ 6 :– 2023–24 ನೇ ಸಾಲಿನಲ್ಲಿ ಅಂದಾಜು ಮೀರಿದ ಖರ್ಚಿನ ಪರಿಶೀಲನೆ ಮತ್ತು ಮಂಜೂರಾತಿ.**
**ನಿರ್ಣಯ :–** 2023–24 ನೇ ಸಾಲಿನಲ್ಲಿ ಅಂದಾಜು ಮೀರಿದ ಖರ್ಚುಗಳ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಶ್ರೀ ಗಣೇಶ್ ನಾಯಕ್ ಸಭೆಗೆ ವಿವರ ನೀಡಿ ಅಂದಾಜು ಮೀರಲು ಕಾರಣವನ್ನು ವಿವರಿಸಿದರು. ನಿರ್ದೇಶಕರ

ವಿವರಣೆಯನ್ನು ಒಪ್ಪಿದ ಸಭೆಯು ಅಂದಾಜು ಮೀರಿದ 4 ಖರ್ಚುಗಳಾದ ಜಿ.ಎಸ್.ಟಿ. **ರೂ 1,389/–,** ಜಾಹೀರಾತು ಮತ್ತು ದೇಣಿಗೆ **ರೂ. 34,800/–,** ಹಾಗೂ ಚಿನ್ನಾಭರಣ ಮರು ಮೌಲ್ಯ ಮಾಪನ ಶುಲ್ಕ **ರೂ 25,000/–** ಹಾಗೂ ಸಿಬ್ಬಂದಿ ಉಪದಾನ ಅನುವು ರೂ 3,48,648/– ಸೇರಿದಂತೆ ಒಟ್ಟು **ರೂ. 4,09,837/–** (ರೂ. ನಾಲ್ಕು ಲಕ್ಷದ ಒಂಭತ್ತು ಸಾವಿರದ ಎಂಟು ನೂರಾ ಮೂವತ್ತೇಳು ಮಾತ್ರ) ಕ್ಕೆ ಸರ್ವಾನುಮತದಿಂದ ಮಂಜೂರಾತಿ ನೀಡಿತು.

**ವಿಷಯ 7 :–2024–25ನೇ ಸಾಲಿನ ಮುಂಗಡ ಪತ್ರದ ಅನುಮೋದನೆ.**

**ನಿರ್ಣಯ :–** ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆಯಲ್ಲಿ ವಿವರವಾಗಿ ನೀಡಲಾದ 2024–25 ನೇ ಸಾಲಿನ ಅಂದಾಜು ಆಯ–ವ್ಯಯ ಪಟ್ಟಿಯನ್ನು ಅಧ್ಯಕ್ಷರ ಅನುಮತಿ ಮೇರೆಗೆ ಮುಖ್ಯ ಕಾರ್ಯನಿರ್ವಾಹಕ ಶ್ರೀ ಗಣೇಶ್ ನಾಯಕ್ ಸಭೆಯಲ್ಲಿ ಮಂಡಿಸಿದರು. ಈ ಬಗ್ಗೆ ಚರ್ಚೆ ನಡೆದ ತರುವಾಯ ಸಾಮಾನ್ಯ ಸಭೆಯ ನೋಟೀಸಿನ ಪುಟ ಸಂಖ್ಯೆ 21 ಹಾಗೂ 22 ರಲ್ಲಿ ಸವಿವರವಾಗಿ ನೀಡಲಾದ **ರೂ. 11,73,00,000** (ರೂಪಾಯಿ ಹನ್ನೊಂದು ಕೋಟಿ ಎಪ್ಪತ್ಮೂರು ಲಕ್ಷ ಮಾತ್ರ) ಒಟ್ಟು ಮೊತ್ತವನ್ನು ಹೊಂದಿರುವ **ರೂ. 1,60,00,000/–** ನಿವ್ವಳ ಲಾಭವನ್ನು ನೀಡುವಂತಹ 2024–25 ನೇ ಸಾಲಿನ ಮುಂಗಡ ಪತ್ರವನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 8 :– 2023–24 ನೇ ಸಾಲಿನಲ್ಲಿ ಸೇರ್ಪಡೆಯಾದ ಹಾಗೂ ಸದಸ್ಯತ್ವ ತ್ಯಜಿಸಿದವರ ವಿವರ ಅನುಮೋದನೆ.**

**ನಿರ್ಣಯ :–**2023–24 ನೇ ಸಾಲಿನಲ್ಲಿ ಸೇರ್ಪಡೆಯಾದ ಹಾಗೂ ಸದಸ್ಯತ್ವ ತ್ಯಜಿಸಿದವರ ವಿವರಗಳನ್ನು ಸಭೆಯಲ್ಲಿ ಮಂಡಿಸಲಾಯಿತು. ವಿವರಗಳನ್ನು ಪರಿಶೀಲಿಸಿದ ಸಭೆಯು ವರದಿ ವರ್ಷದಲ್ಲಿ ನೂತನವಾಗಿ ಸೇರ್ಪಡೆಯಾದ "ಅ" ವರ್ಗದ **279,** "ಬಿ" ವರ್ಗದ **3** ಸದಸ್ಯರ ಹಾಗೂ ಸದಸ್ಯತ್ವ ತ್ಯಜಿಸಿದ **37** "ಅ" ವರ್ಗದ, **31** "ಬಿ" ವರ್ಗದ ಸದಸ್ಯರ ವಿವರಗಳಿಗೆ ಸರ್ವಾನುಮತದಿಂದ ಅನುಮೋದನೆ ನೀಡಿತು.

**ವಿಷಯ 9: – 2024–25 ನೇ ಸಾಲಿಗೆ ಶಾಸನಬದ್ಧ ಲೆಕ್ಕ ಪರಿಶೋಧಕರ ನೇಮಕಾತಿ ಹಾಗೂ ಲೆಕ್ಕ ಪರಿಶೋಧನಾ ಶುಲ್ಕ ನಿಗದಿ.**

**ನಿರ್ಣಯ :–** ಕಳೆದ 25 ವರ್ಷಗಳಿಂದ ಲೆಕ್ಕ ಪರಿಶೋಧಕರಾಗಿ ಸೇವೆ ಸಲ್ಲಿಸಿ ಸಂಘಕ್ಕೆ ಉಪಯುಕ್ತ ಸಲಹೆ ಸೂಚನೆಗಳನ್ನು ನೀಡಿ ಸಹಕರಿಸಿದ ಕುಂದಾಪುರದ ಹಿರಿಯ ಲೆಕ್ಕ ಪರಿಶೋಧಕರಾದ ಶ್ರೀ ಎನ್. ಶಾಂತಾರಾಮ ನಾಯಕ್ ರವರನ್ನು ಲೆಕ್ಕ ಪರಿಶೋಧಕರನ್ನಾಗಿ ಆಯ್ಕೆ ಮಾಡುವಂತೆ ದಿನಾಂಕ 19–08–2024 ರಂದು ನಡೆದ ಆಡಳಿತ ಮಂಡಳಿಯು ನಿರ್ಣಯ ಸಂಖ್ಯೆ 56/2024–25 ರಂತೆ ಶಿಫಾರಸು ಮಾಡಿರುವ ವಿಷಯವನ್ನು ನಿರ್ದೇಶಕ ಶ್ರೀ ಬಿ. ರಾಘವೇಂದ್ರ ಪೈ ಸಭೆಯ ಗಮನಕ್ಕೆ ತಂದರು. ನಿರ್ದೇಶಕರು ನೀಡಿದ ವಿವರಣೆಗೆ ಒಪ್ಪಿದ ಸಭೆಯು ಲೆಕ್ಕ ಪರಿಶೋಧನಾ ಇಲಾಖಾ ಸನ್ನದು ಲೆಕ್ಕಪರಿಶೋಧಕರ ಪಟ್ಟಿಯಲ್ಲಿ ಕ್ರಮ ಸಂಖ್ಯೆ– 1137 ಹಾಗೂ ನೋಂದಣಿ ಸಂಖ್ಯೆ C–20/02/2013–22:23:44 ಹೊಂದಿರುವ ಶ್ರೀ ಎನ್. ಶಾಂತಾರಾಮ ನಾಯಕ್, ಲೆಕ್ಕಪರಿಶೋಧಕರು, ಕುಂದಾಪುರ ಇವರನ್ನು 2024–25ನೇ ಸಾಲಿಗೆ ಶಾಸನಬದ್ಧ ಲೆಕ್ಕ ಪರಿಶೋಧಕರಾಗಿ ನೇಮಕಾತಿ ಮಾಡಲು ಸರ್ವಾನುಮತದಿಂದ ನಿರ್ಣಯಿಸಿತು. ಲೆಕ್ಕಪರಿಶೋಧನಾ ಶುಲ್ಕವನ್ನು ವರದಿ ವರ್ಷಾಂತ್ಯದ ದುಡಿಯುವ ಬಂಡವಾಳವನ್ನು ಆಧರಿಸಿ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆಯ ಮಾರ್ಗಸೂಚಿಯ ಪ್ರಕಾರ ಪಾವತಿ ಮಾಡಲು ಆಡಳಿತ ಮಂಡಳಿಗೆ ಅಧಿಕಾರ ನೀಡಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

**ವಿಷಯ 10:– 2025–26 ನೇ ಸಾಲಿಗೆ ಆಂತರಿಕ ಲೆಕ್ಕ ಪರಿಶೋಧಕರ ನೇಮಕಾತಿ ಹಾಗೂ ಶುಲ್ಕ ನಿಗದಿ.**

**ನಿರ್ಣಯ :–** 2025–2026 ನೇ ಸಾಲಿಗೆ ಆಂತರಿಕ ಲೆಕ್ಕ ಪರಿಶೋಧಕರಾಗಿ ಮೆಸರ್ಸ್ ಜಯಲಕ್ಷ್ಮೀ ಕಾಮತ್ & ಕೋ, ಲೆಕ್ಕ ಪರಿಶೋಧಕರು, ಅಂಬಲ್ಪಾಡಿ, ಉಡುಪಿ ಇವರನ್ನು ಆಯ್ಕೆ ಮಾಡುವಂತೆ ದಿನಾಂಕ 19–08–2024 ರಂದು ನಡೆದ ಆಡಳಿತ ಮಂಡಳಿಯು ನಿರ್ಣಯ ಸಂಖ್ಯೆ 57/2024–25 ರಂತೆ ಶಿಫಾರಸು ಮಾಡಿರುವ

ವಿಷಯವನ್ನು ನಿರ್ದೇಶಕ ಶ್ರೀ ಬಿ. ರಾಘವೇಂದ್ರ ಪೈ ಸಭೆಯ ಗಮನಕ್ಕೆ ತಂದರು. ನಿರ್ದೇಶಕರು ನೀಡಿದ ವಿವರಣೆಗೆ ಒಪ್ಪಿದ ಸಭೆಯು ಲೆಕ್ಕ ಪರಿಶೋಧನಾ ಇಲಾಖಾ ಸನ್ನದು ಲೆಕ್ಕಪರಿಶೋಧಕರ ಪಟ್ಟಿಯಲ್ಲಿ ಕ್ರಮ ಸಂಖ್ಯೆ–1160 ಹಾಗೂ ನೋಂದಣಿ ಸಂಖ್ಯೆ F–05/07/2023–11:34:367 ಹೊಂದಿರುವ ಮೆಸರ್ಸ್ ಜಯಲಕ್ಷ್ಮೀ ಕಾಮತ್ & ಕೋ, ಲೆಕ್ಕ ಪರಿಶೋಧಕರು, ಅಂಬಲ್ಪಾಡಿ, ಉಡುಪಿ ಇವರನ್ನು 2025–26 ನೇ ಸಾಲಿಗೆ ಆಂತರಿಕ ಲೆಕ್ಕ ಪರಿಶೋಧಕರಾಗಿ ನೇಮಕಾತಿ ಮಾಡಲು ಸರ್ವಾನುಮತದಿಂದ ನಿರ್ಣಯಿಸಿತು. ಆಂತರಿಕ ಲೆಕ್ಕ ಪರಿಶೋಧನಾ ಶುಲ್ಕವಾಗಿ ವಾರ್ಷಿಕ **ರೂ. 1,50,000** + ಜಿ.ಎಸ್.ಟಿ. (ರೂ ಒಂದು ಲಕ್ಷದ ಐವತ್ತು ಸಾವಿರ ಮತ್ತು ಜಿ.ಎಸ್.ಟಿ.) ನಿಗದಿ ಪಡಿಸಿ ಸರ್ವಾನುಮತದ ನಿರ್ಣಯ ಕೈಗೊಂಡಿತು.

**ವಿಷಯ 11 :– 2024–25 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯ ಅನುಮೋದನೆ.**

**ನಿರ್ಣಯ :–** ಆಡಳಿತ ಮಂಡಳಿಯು ಶಿಪಾರಸು ಮಾಡಿದ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆಯ ಪುಟ ಸಂಖ್ಯೆ 17 ರಲ್ಲಿ ವಿವರವಾಗಿ ನೀಡಲಾದ 2024–25 ನೇ ಸಾಲಿನ ಕ್ರಿಯಾ ಯೋಜನೆಗಳ ಕುರಿತು ನಿರ್ದೇಶಕ ಶ್ರೀ ಬಿ. ರಾಘವೇಂದ್ರ ಪೈ ಸಭೆಗೆ ವಿವರಿಸಿದರು. ಈ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು. ಕೊನೆಗೆ, ಆಡಳಿತ ಮಂಡಳಿಯು ಶಿಫಾರಸು ಮಾಡಿದ 2024–25 ನೇ ಸಾಲಿನ ಕ್ರಿಯಾಯೋಜನೆಗಳಿಗೆ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

**ವಿಷಯ 12 :– ಮೀಸಲು ಹಾಗು ಇತರ ನಿಧಿಗಳ ವಾಸ್ತವಿಕ ಬಳಕೆಯ ಪುನರಾವಲೋಕನ.**

**ನಿರ್ಣಯ:** 2023–24 ನೇ ಸಾಲಿನಲ್ಲಿ ಶಿಕ್ಷಣ ನಿಧಿಯ ಬಗ್ಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಗೆ ಪಾವತಿಸಿದ ಮೊತ್ತ **ರೂ 2,04,228/–** ಹಾಗೂ ಸಾರ್ವಜನಿಕ ಉಪಕಾರ ನಿಧಿಯಿಂದ ವಿವಿಧ ಸಂಘ ಸಂಸ್ಥೆಗಳಿಗೆ ನೀಡಲಾದ ಮೊತ್ತ **ರೂ 2,08,501/–** ರ ಬಗ್ಗೆ ಮುಖ್ಯ ಕಾರ್ಯನಿರ್ವಾಹಕರು ವಿವರ ನೀಡಿದರು. ಕಾರ್ಯನಿರ್ವಾಹಕರು ನೀಡಿದ ವಿವರಗಳನ್ನು ಪರಿಶೀಲಿಸಿದ ಸಭೆಯು ಎರಡೂ ನಿಧಿಗಳ ವಾಸ್ತವಿಕ ಬಳಕೆಗೆ ಸರ್ವಾನುಮತದಿಂದ ಅನುಮೋದನೆ ನೀಡಿತು.

**ವಿಷಯ 13 :– 6 ವರ್ಷ ಮೇಲ್ಪಟ್ಟ ಅನುತ್ಪಾದಕ ವಾಹನ ಖರೀದಿ ಸಾಲಗಳನ್ನು ಆಸ್ತಿ–ಜವಾಬ್ದಾರಿ ತಖ್ತೆಯಿಂದ ಹೊರಗಿಡುವ ಕುರಿತು.**

**ನಿರ್ಣಯ :** 6 ವರ್ಷ ಮೇಲ್ಪಟ್ಟ 59 ಸಾಲಗಳ ಒಟ್ಟು **ರೂ 24,91,372/–** ರ ವಿವರಗಳನ್ನು ನಿರ್ದೇಶಕ ಶ್ರೀ ಬಿ. ರಾಘವೇಂದ್ರ ಪೈ ಸಭೆಯಲ್ಲಿ ಮಂಡಿಸಿದರು. ಈ ಬಗ್ಗೆ ಚರ್ಚೆ ನಡೆದು ಕೊನೆಯಲ್ಲಿ ಸಭೆಯು ಆಡಳಿತ ಮಂಡಳಿ ನಿರ್ಣಯವನ್ನು ಪುರಸ್ಕರಿಸಿ 6 ವರ್ಷ ಮೇಲ್ಪಟ್ಟ 59 ಸಾಲಗಳ **ರೂ 24,91,372/–** ನ್ನು ಆಸ್ತಿ–ಜವಾಬ್ದಾರಿ ತಖ್ತೆಯಿಂದ ಹೊರಗಿಡಲು ಸರ್ವಾನುಮತದಿಂದ ಅನುಮತಿ ನೀಡಿತು. ಮುಖ್ಯ ಕಾರ್ಯನಿರ್ವಾಹಕರಾಗಿ 25 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿ ಸಂಘದ ಅಭಿವೃದ್ಧಿಗೆ ಗಣನೀಯ ಕೊಡುಗೆ ನೀಡಿದ ಶ್ರೀ ಗಣೇಶ್ ನಾಯಕ್ ರವರನ್ನು ಸಭೆಯಲ್ಲಿ ಸಂಘದ ಪರವಾಗಿ ಅಭಿನಂದಿಸಿ ಗೌರವಿಸಲಾಯಿತು. ನಿರ್ದೇಶಕಿ ಶ್ರೀಮತಿ ಗೀತಾ ಜಿ. ನಾಯಕ್ ಸಭೆಗೆ ಗೈರು ಹಾಜರಾಗಿದ್ದು, ಅಧ್ಯಕ್ಷರು ಸೇರಿದಂತೆ ಆಡಳಿತ ಮಂಡಳಿಯ 15 ಸದಸ್ಯರು ಉಪಸ್ಥಿತರಿದ್ದರು.

**ಗಂಗೊಳ್ಳಿ**
**15–09–2024**

**ಅಧ್ಯಕ್ಷರು / ಮುಖ್ಯ ಕಾರ್ಯನಿರ್ವಾಹಕ**

# 2024–25ನೇ ಸಾಲಿನ ಆಡಳಿತ ಮಂಡಳಿ ವರದಿ

ಸನ್ಮಾನ್ಯ ಸದಸ್ಯರೇ,

ತಮ್ಮೆಲ್ಲರ ಸಹಕಾರದಿಂದ ಸಂಘವು ನಿರಂತರ ಪ್ರಗತಿಯಲ್ಲಿ ಮುಂದುವರಿಯುತ್ತಿದ್ದು, 31–03–2025ಕ್ಕೆ ಅಂತ್ಯಗೊಂಡ ವರದಿ ವರ್ಷದ ಅಂಕಿ–ಅಂಶಗಳು ಹಾಗೂ ಆಡಳಿತ ವರದಿಯನ್ನು ತಮ್ಮ ಮುಂದೆ ಮಂಡಿಸಲು ಸಂತೋಷವಾಗುತ್ತಿದೆ.

**1. ದುಡಿಯುವ ಬಂಡವಾಳ :**

31–03–2025ರಂದು ಅಂತ್ಯಗೊಂಡ ಸಹಕಾರಿ ವರ್ಷದಲ್ಲಿ ಸಂಸ್ಥೆಯು ಉತ್ತಮವಾಗಿ ಕಾರ್ಯನಿರ್ವಹಿಸಿದ್ದು ದುಡಿಯುವ ಬಂಡವಾಳವು **ರೂ. 100.80** ಕೋಟಿ ದಾಖಲಾಗಿದ್ದು, ಉಡುಪಿ ಜಿಲ್ಲೆಯಲ್ಲಿ **100 ಕೋಟಿ** ದುಡಿಯುವ ಬಂಡವಾಳ ಹೊಂದಿರುವ ಮೊದಲ ಸೌಹಾರ್ದ ಸಹಕಾರಿ ಸಂಘವೆಂಬ ಹೆಗ್ಗಳಿಕೆ ನಮ್ಮ ಸಂಘವು ಪಾತ್ರವಾಗಿದೆ. ಕಳೆದ ಸಾಲಿನಲ್ಲಿ ಇದು **ರೂ. 87.77** ಕೋಟಿ ಆಗಿತ್ತು.

**2. ಸದಸ್ಯತ್ವ ಮತ್ತು ಪಾಲು ಬಂಡವಾಳ :**

ಕಳೆದ ಸಾಲಿನ ಆರಂಭದಲ್ಲಿ **ರೂ 2.28 ಕೋಟಿ**ಯಿದ್ದ ಪಾಲು ಬಂಡವಾಳವು ವರ್ಷಾಂತ್ಯಕ್ಕೆ **ರೂ. 2.66 ಕೋಟಿಗೆ** ಏರಿಕೆಯಾಗಿದ್ದು ವರದಿ ಸಾಲಿನ ಅಂತ್ಯಕ್ಕೆ ಸದಸ್ಯರ ಸಂಖ್ಯಾ ವಿವರ ಈ ಕೆಳಗಿನಂತಿದೆ.

| ಸದಸ್ಯ ವರ್ಗ | ವರ್ಷಾರಂಭದಲ್ಲಿ | ಸೇರ್ಪಡೆ | ರದ್ಧತಿ | ವರ್ಷಾಂತ್ಯದಲ್ಲಿ |
|---|---|---|---|---|
| ಅ | **3590** | **329** | **28** | **3891** |
| ಬ | **603** | **4** | **13** | **594** |
| ಕ | **3656** | **176** | – | **3832** |

**3. ಸದಸ್ಯರ ಠೇವಣಾತಿಗಳು ಹಾಗೂ ಸಾಲಗಳು :**

ಸದಸ್ಯರ ಸಹಕಾರದಿಂದ ವರದಿ ವರ್ಷಾಂತ್ಯಕ್ಕೆ ಎಲ್ಲಾ ವಿಧದ ಠೇವಣಿಗಳ ಮೊತ್ತ **ರೂ. 85,56,32,707/–** ಗಳಾಗಿದ್ದು, ಸದಸ್ಯರ ಹೊರಬಾಕಿ ಸಾಲ **ರೂ. 82,02,60,081/–**ಗಳಾಗಿರುತ್ತವೆ. ಒಟ್ಟು ಹೊರಬಾಕಿ ಸಾಲದಲ್ಲಿ **4,94,56,987/–** ಸುಸ್ತಿ ಸಾಲವಾಗಿದ್ದು, ಸುಸ್ತಿ ಸಾಲದ ಪ್ರತಿ ಶತ ಪ್ರಮಾಣ **6.03** ಆಗಿದೆ. ಕಳೆದ ಸಾಲಿನಲ್ಲಿ ಇದು **ಶೇ 7.37** ಆಗಿತ್ತು. ಮುಂದಿನ ದಿನಗಳಲ್ಲಿ ಆರ್ಥಿಕ ಪರಿಸ್ಥಿತಿ ಸುಧಾರಿಸಿ ಅನುತ್ಪಾದಕ ಆಸ್ತಿಯಲ್ಲಿ ಇನ್ನಷ್ಟು ಇಳಿಕೆಯಾಗುವ ಆಶಾಭಾವನೆ ಇದೆ ಮತ್ತು ಈ ಬಗ್ಗೆ ಹೆಚ್ಚಿನ ಪ್ರಯತ್ನ ಮತ್ತು ಕಾಳಜಿ ವಹಿಸಲಾಗುತ್ತಿದೆ.

**4. ವಿನಿಯೋಗಗಳು**

ಸಂಘದ ಶಾಸನಬದ್ಧ ನಿಧಿಗಳನ್ನು ಹಾಗೂ ಹೆಚ್ಚುವರಿ ಠೇವಣಿಗಳನ್ನು ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಕಲಂ 18(ಬಿ) ಯನ್ವಯ ಭಾರತೀಯ ರಿಸರ್ವ ಬ್ಯಾಂಕಿನಲ್ಲಿ ನೋಂದಾಯಿಸಲ್ಪಟ್ಟ ಸಹಕಾರಿ ಬ್ಯಾಂಕ್‌ಗಳಲ್ಲಿ ವಿನಿಯೋಗಿಸಲಾಗಿದ್ದು ವರ್ಷಾಂತ್ಯಕ್ಕೆ ಅವುಗಳ ಮೊತ್ತ ರೂ. **24,54,76,314/–** ಆಗಿದ್ದು ವಿವರ ಈ ಕೆಳಗಿನಂತಿದೆ.

| ಕ್ರ ಸಂ | ಸಂಸ್ಥೆಯ ವಿವರ | ಹೂಡಿಕೆ ಮೊತ್ತ ರೂ. |
|---|---|---|
| 1 | ಭಟ್ಕಳ ಅರ್ಬನ್ ಸಹಕಾರಿ ಬ್ಯಾಂಕ್ ನಿಯಮಿತ | 3,00,00,000 |
| 2 | ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿಯಮಿತ | 5,00,01,166 |
| 3 | ಮಹಾಲಕ್ಷ್ಮೀ ಸಹಕಾರಿ ಬ್ಯಾಂಕ್ ನಿಯಮಿತ | 5,00,00,000 |
| 4 | ಟೀಚರ್ಸ್ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ | 3,50,00,000 |
| 5 | ಸಿರ್ಸಿ ಅರ್ಬನ್ ಕೋ–ಆಪ್ ಬ್ಯಾಂಕ್ ನಿಯಮಿತ | 4,00,05,240 |

| | | |
|---|---|---|
| 6 | ಎಸ್.ವಿ.ಸಿ. ಕೊ-ಆಪರೇಟಿವ್ ಬ್ಯಾಂಕ್ ನಿಯಮಿತ | 3,01,69,908 |
| 7 | ಕರ್ಣಾಟಕ ಬ್ಯಾಂಕ್ ನಿಯಮಿತ | 1,00,00,000 |
| 8 | ದ.ಕ.ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಕ್ಷೇಮ ನಿಧಿ | 3,00,000 |
| | ಒಟ್ಟು | **₹ 24,54,76,314** |

**5. ಈ ಸ್ಟಾಂಪಿಂಗ್ ಮತ್ತು ಪಹಣಿ ಪತ್ರಿಕೆ (ಆರ್.ಟಿ.ಸಿ. ಸೇವೆ) :**

ವರದಿ ಸಾಲಿನಲ್ಲಿ ಗಂಗೊಳ್ಳಿಯ ಪ್ರಧಾನ ಕಚೇರಿ, ಕೋಟೇಶ್ವರ ಹಾಗೂ ಉಪ್ಪುಂದ ಶಾಖೆಗಳು ಸೇರಿದಂತೆ 3 ಈ- ಸ್ಟಾಂಪಿಂಗ್ ವಿತರಣಾ ಕೇಂದ್ರಗಳಲ್ಲಿ ಒಟ್ಟು **68,43,509/-** ರೂ. ಮೌಲ್ಯದ **12,783** ಠಸೆ ಕಾಗದಗಳನ್ನು **938** ಆರ್.ಟಿ.ಸಿ.ಗಳನ್ನು ವಿತರಿಸಲಾಗಿದೆ.

| ಕ್ರ. ಸಂ. | ಶಾಖೆ | ಠಸೆ ಕಾಗದಗಳು | ಮೌಲ್ಯ ರೂ. | ಆರ್.ಟಿ.ಸಿ. |
|---|---|---|---|---|
| 1. | ಗಂಗೊಳ್ಳಿ | 2,424 | 13,05,698 | 509 |
| 2. | ಕೋಟೇಶ್ವರ | 5,989 | 33,02,117 | 284 |
| 3. | ಉಪ್ಪುಂದ | 4,370 | 22,35,694 | 145 |
| | ಒಟ್ಟು | **12,783** | **₹ 68,43,509** | **938** |

**6. ಶಾಖೆಗಳು ಮತ್ತು ಶಾಖೆಗಳಲ್ಲಿ ವ್ಯವಹಾರ :**

ಸಂಘದ ಗಂಗೊಳ್ಳಿ, ಕೋಟೇಶ್ವರ ಹಾಗೂ ಉಪ್ಪುಂದ ಶಾಖೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು 31-03-2025 ರಂದು ಇದ್ದಂತೆ ಶಾಖಾವಾರು ಠೇವಣಾತಿ ಹಾಗೂ ಸಾಲಗಳ ವಿವರ ಈ ಕೆಳಗಿನಂತಿದೆ.

| ಶಾಖೆ | ಠೇವಣಾತಿಗಳು | ಹೊರಬಾಕಿ ಸಾಲ |
|---|---|---|
| ಗಂಗೊಳ್ಳಿ | 60,17,15,801 | 61,66,42,504 |
| ಕೋಟೇಶ್ವರ | 14,18,54,137 | 6,69,79,433 |
| ಉಪ್ಪುಂದ | 11,20,62,769 | 13,66,38,144 |
| ಒಟ್ಟು | **₹ 85,56,32,707** | **₹ 82,02,60,081** |

**7. ನಿವ್ವಳ ಲಾಭ, ತಲಾ ಶೇರಿನ ಆದಾಯ, ಶೇರಿನ ಪುಸ್ತಕ ಮೌಲ್ಯ ಮತ್ತು ಲಾಭ ವಿಂಗಡಣೆ :**

ಸದಸ್ಯರೆಲ್ಲರ ಸಹಕಾರ, ನಿರ್ದೇಶಕ ಮಂಡಳಿ ಹಾಗೂ ಸಿಬ್ಬಂದಿಗಳ ಸಂಘಟಿತ ಕಾರ್ಯ ಯೋಜನೆಯ ಪರಿಣಾಮಕಾರಿ ಅನುಷ್ಠಾನದಿಂದ ವರದಿ ಸಾಲಿನಲ್ಲಿ ಸಂಘವು 1,14,26,542.38 ನಿವ್ವಳ ಲಾಭ ಗಳಿಸಿದ್ದು (ಕಳೆದ ಸಾಲಿನಲ್ಲಿ ರೂ 1,09,09,922.46) ಕಳೆದ ಸಾಲಿಗೆ ಹೋಲಿಸಿದರೆ ಲಾಭದಲ್ಲಿ 4.73% ಹೆಚ್ಚುವರಿಯಾಗಿದೆ.

ವರದಿ ವರ್ಷಾಂತ್ಯಕ್ಕೆ ರೂ 1,000/- ಮೌಲ್ಯದ ಷೇರೊಂದರ ತಲಾ ಆದಾಯವು ರೂ 436/- ಹಾಗೂ ಪುಸ್ತಕ ಮೌಲ್ಯವು ರೂ 3,702/- ಆಗಿರುತ್ತದೆ.

ನಿವ್ವಳ ಲಾಭವನ್ನು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997 ಮತ್ತು ಸಂಘದ ಉಪವಿಧಿಗಳ ಅನುಸಾರ ಈ ಕೆಳಗಿನಂತೆ ವಿಂಗಡಿಸಲು ದಿನಾಂಕ 12-08-2025 ರಂದು ನಡೆದ ನಿರ್ದೇಶಕ ಮಂಡಳಿ ಸಭೆಯು ಶಿಫಾರಸು ಮಾಡಿದೆ.

| ಕ್ರ. ಸಂ | ಲಾಭ ವಿಂಗಡಣೆಯ ವಿವರ | ಎಷ್ಟು | ಮೊತ್ತ ರೂ. |
|---|---|---|---|
| 1. | ಮೀಸಲು ನಿಧಿ | 25% | 28,56,636.00 |
| 2. | ಸಹಕಾರಿ ಶಿಕ್ಷಣ ನಿಧಿ | 2% | 2,28,531.00 |
| 3. | ಸಹಕಾರಿ ಅಕಾಡೆಮಿ ಮೈಸೂರು ನಿಧಿಗೆ | 0.5% | 57,133.00 |
| 4. | ಕಾರ್ಯಾಚರಣೆ ಮೀಸಲು ನಿಧಿಗೆ | 10% | 11,42,654.00 |
| 5. | ಸಾಮಾನ್ಯ ಕ್ಷೇಮ ನಿಧಿಗೆ | 5% | 5,71,327.00 |
| 6. | ಸಿಬ್ಬಂದಿ ಬೋನಸ್ಸು | 2 ತಿಂಗಳ ವೇತನ | 10,46,415.00 |
| 7. | ಅ ವರ್ಗದ ಲಾಭಾಂಶ | 17% | 39,79,012.00 |
| | ಬ ವರ್ಗದ ಲಾಭಾಂಶ | 17% | 68,562.00 |
| 8. | ಪಾಲು ಮುನಾಫೆ ಸಮೀಕರಣ ನಿಧಿಗೆ | 2% | 2,28,531.00 |
| 9. | ಸಾರ್ವಜನಿಕ ಉಪಕಾರ ನಿಧಿಗೆ | 2% | 2,28,531.00 |
| 10. | ಕಟ್ಟಡ ನಿಧಿಗೆ | 4% | 4,57,062.00 |
| 11. | ಸಿಬ್ಬಂದಿ/ಸದಸ್ಯರ ಕ್ಷೇಮ ನಿಧಿ | 2% | 2,28,531.00 |
| 12. | ಸದಸ್ಯರ ಶಿಕ್ಷಣ ನಿಧಿ | 2% | 2,28,531.00 |
| 13. | ಉಳಿದ ಮೊಬಲಗು ಮೀಸಲು ನಿಧಿಗೆ | | 1,05,086.38 |
| | | **ಒಟ್ಟು** | **₹ 1,14,26,542.38** |

**8. ಆಡಳಿತ ಮಂಡಳಿ ಸಭೆ ಮತ್ತು ಸಾಮಾನ್ಯ ಸಭೆ.**

ವರದಿ ಸಾಲಿನಲ್ಲಿ 9 ಆಡಳಿತ ಮಂಡಳಿ ಸಭೆ ಜರಗಿದೆ. ಆಡಳಿತ ಮಂಡಳಿ ಸಭೆಯ ನಿರ್ಣಯ ಸಂಖ್ಯೆ 133/2021 ರಂತೆ ವರದಿ ಸಾಲಿನಲ್ಲಿ ಒಟ್ಟು 11 ನಿರ್ದೇಶಕರಿಗೆ ರೂ.1,36,500/- ಸಭಾ ಭತ್ಯೆ ಪಾವತಿಸಲಾಗಿದೆ.

ವರದಿ ವರ್ಷದ ಸಾಮಾನ್ಯ ಸಭೆಯು 15 ಸಪ್ಟಂಬರ್ 2024 ನೇ ಆದಿತ್ಯವಾರ ಪೂರ್ವಾಹ್ನ 11 ಘಂಟೆಗೆ ಸರಿಯಾಗಿ ಗಂಗೊಳ್ಳಿಯ ಶ್ರೀ ವಿಠಲ ರಕುಮಾಯಿ ದೇವಸ್ಥಾನದ ಶ್ರೀ ವೀರ ವಿಠಲ ಸಭಾಗೃಹದಲ್ಲಿ ಜರಗಿದ್ದು, ಸಭೆಯಲ್ಲಿ ಒಟ್ಟು 551 ಸದಸ್ಯರು ಭಾಗವಹಿಸಿದ್ದರು.

**9. ಸಿಬ್ಬಂದಿ ಮತ್ತು ಸಿಬ್ಬಂದಿ ತರಬೇತಿ :**

ವರದಿ ಸಾಲಿನಲ್ಲಿ ಮುಖ್ಯ ಕಾರ್ಯನಿರ್ವಾಹಕರು ಸೇರಿದಂತೆ ಒಟ್ಟು 14 ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ವರದಿ ಸಾಲಿನಲ್ಲಿ ಸಿಬ್ಬಂದಿ ವೆಚ್ಚದ ಬಗ್ಗೆ ರೂ 59,51,640/- ವ್ಯಯಿಸಲಾಗಿದ್ದು ಇದು ಸಂಘದ ದುಡಿಯುವ ಬಂಡವಾಳದ 0.59 ಆಗಿದ್ದು ಕಳೆದ ಸಾಲಿನಲ್ಲಿ ಇದು 0.66 ಆಗಿತ್ತು.

**10. ಸಂಸ್ಥಾಪಕರ ದಿನಾಚರಣೆ ಮತ್ತು ಸೌಹಾರ್ದ ಸಹಕಾರ ಕಾಯ್ದೆಯ 25 ನೇ ವರ್ಷದ ಪ್ರಾರಂಭೋತ್ಸವ**

ಸಂಸ್ಥಾಪಕ ಶ್ರೀ ಎಚ್. ಲಕ್ಷ್ಮೀನಾರಾಯಣ ಕಾಮತ್ ರ ದಿನ ಹಾಗೂ ಸೌಹಾರ್ದ ಸಹಕಾರ ಕಾಯ್ದೆಯ 25 ನೇ ವರ್ಷದ ಪ್ರಾರಂಭೋತ್ಸವ ಸಮಾರಂಭವನ್ನು ದಿನಾಂಕ 12-01-2025 ನೇ ಆದಿತ್ಯವಾರ ಗಂಗೊಳ್ಳಿಯ ಶ್ರೀ ವಿಠಲ ರಕುಮಾಯಿ ದೇವಸ್ಥಾನದ ಶ್ರೀ ವೀರ ವಿಠಲ ಸಭಾಗೃಹದಲ್ಲಿ ಆಚರಿಸಲಾಯಿತು.

ಸೌಹಾರ್ದ ಸಹಕಾರ ಕಾಯ್ದೆಯ 25 ನೇ ವರ್ಷದ ಪ್ರಾರಂಭೋತ್ಸವವನ್ನು ಸಂಘದ ನಿಕಟಪೂರ್ವ ಅಧ್ಯಕ್ಷರು ಹಾಗೂ ನಿರ್ದೇಶಕರು ಆದ ಶ್ರೀ ಎಚ್. ಗಣೇಶ್ ಕಾಮತ್ ದೀಪ ಬೆಳಗಿಸಿ ಉದ್ಘಾಟಿಸಿದರು.

ಸಮಾರಂಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ್, ಪ್ರಾಂತೀಯ ಅಧಿಕಾರಿ ಶ್ರೀ ಗುರು ಪ್ರಸಾದ್ ಬಂಗೇರ, ಅಭಿವೃದ್ಧಿ ಅಧಿಕಾರಿ ಶ್ರೀ ವಿಜಯ್ ಬಿ.ಎಸ್., ಉಡುಪಿ ಜಿಲ್ಲಾ ಸೌಹಾರ್ದ ಒಕ್ಕೂಟದ ಕಾರ್ಯದರ್ಶಿ ಶ್ರೀ ಲೋಹಿತ್ ಸಾಲಿಯಾನ್ ಹಾಗೂ ಗಂಗೊಳ್ಳಿ ಸೇವಾ ಸಹಕಾರಿ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಶ್ರೀ ದಯಾನಂದ ಜಿ. ಯವರನ್ನು ಗೌರವಿಸಲಾಯಿತು.

ಗಂಗೊಳ್ಳಿ, ಕೋಟೇಶ್ವರ ಹಾಗೂ ಉಪ್ಪುಂದ ಪರಿಸರದ ಶಿಕ್ಷಣ ಸಂಸ್ಥೆಗಳ ಪ್ರತಿಭಾವಂತ ಹಾಗೂ ಕ್ರೀಡೆ, ಸಂಗೀತ ಹಾಗೂ ಅಬಾಕಸ್ ಸ್ಪರ್ಧೆಯಲ್ಲಿ ಗಣನೀಯ ಸಾಧನೆ ಮಾಡಿದ 180 ವಿದ್ಯಾರ್ಥಿಗಳಿಗೆ ಒಟ್ಟು ರೂ 2,01,100/–ನಗದು ಪುರಸ್ಕಾರವನ್ನು ನೀಡಿ ಗೌರವಿಸಲಾಯಿತು.

**11. ಸಾಮಾಜಿಕ ಕಳಕಳಿ**

ಸಂಘದ ಸಾರ್ವಜನಿಕ ಉಪಕಾರ ನಿಧಿಯಿಂದ ವಿವಿಧ ಕೊಡುಗೆಗಳ ಹಸ್ತಾಂತರ ಕಾರ್ಯಕ್ರಮ ದಿನಾಂಕ 04–10–2024 ರಂದು ಸಂಘದ ಪ್ರಧಾನ ಕಚೇರಿಯ ಶ್ರೀ ಬೈಲೂರು ಮಂಜುನಾಥ ಶೆಣೈ ಸಭಾಭವನದಲ್ಲಿ ಜರಗಿತು. ಸಮಾರಂಭದಲ್ಲಿ ಒಟ್ಟು ರೂ 2.80 ಲಕ್ಷ ದೇಣಿಗೆಯನ್ನು ವಿವಿಧ ಸಂಘ ಸಂಸ್ಥೆಗಳಿಗೆ, ಸದಸ್ಯರಿಗೆ ಹಾಗೂ ಸಾರ್ವಜನಿಕರಿಗೆ ನೀಡಲಾಯಿತು.

**12. 2025–26 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆ**

2025–2026ನೇ ಸಾಲಿನಲ್ಲಿ ಸಂಘದ ವ್ಯವಹಾರ ಅಭಿವೃದ್ಧಿ ಪಡಿಸಲು ಕೈಗೊಳ್ಳಬಹುದಾದ ಕಾರ್ಯಗಳ ಬಗ್ಗೆ ಆಡಳಿತ ಮಂಡಳಿಯು ಕೆಲವು ಯೋಜನೆಗಳನ್ನು ರೂಪಿಸಿದ್ದು ಅವುಗಳ ಸಂಕ್ಷಿಪ್ತ ವಿವರ ಈ ಕೆಳಗಿನಂತಿದೆ.

1. ಸದಸ್ಯರ ಸಂಖ್ಯೆ 5000 ತಲುಪುವುದು
2. ಠೇವಣಿ ಗುರಿ 100 ಕೋಟಿ ತಲುಪುವುದು
3. ಲಾಭದ ಗುರಿ 1.60 ಕೋಟಿ ತಲುಪುವುದು
